ಸಂಪುಟ: ೦೬/ ಸಂಚಿಕೆ: ೨೨೯/ಶುಕ್ರವಾರ ದಿನಾಂಕ: ೦೮-೧೧-೨೦೨೪/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 229 / FRIDAY Date : 08-11-2024/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

### ॥ ಸಪ್ತಋಷಿವಾಣಿ ॥

ಬದುಕಿನಲ್ಲಿ ವ್ಯಕ್ತಿಯ ಪರಿಚಯವಾಗುವುದು ಅವರ ಹೆಸರಿನಿಂದ ಆದರೆ. ಹೃದಯದಲ್ಲಿ ವ್ಯಕ್ತಿಯ ನೆನಪು ಉಳಿಯುವುದು ಅವರ ಗುಣ ನಡತೆಯಿಂದ.

ಧಾರ್ಮಿಕ ಮಾರ್ಗದರ್ಶಕ
ಸಂತೋಷ ಆಚಾರ್ಯ, ಉಡುಪಿ

## ಸರಕಾರಿ ಕಚೇರಿ- ಆವರಣಗಳಲ್ಲಿ ಧೂಮಪಾನ ತಂಬಾಕು ಸೇವನೆ ನಿಷೇಧ : ರಾಜ್ಯ ಸರಕಾರ ಆದೇಶ



ಬೆಂಗಳೂರು : ಸರಕಾರಿ ಕಚೇರಿ ಹಾಗೂ ಆವರಣಗಳಲ್ಲಿ ಧೂಮಪಾನ ಸೇರಿದಂತೆ ತಂಬಾಕು ಉತ್ಪನ್ನಗಳ ಸೇವನೆಯನ್ನು ನಿರ್ಬಂಧಿಸಿ ರಾಜ್ಯ ಸರಕಾರ ಆದೇಶಿಸಿದೆ.

ಸಿಬ್ಬಂದಿ ಹಾಗೂ ಆಡಳಿತ ಸುಧಾರಣೆ ಇಲಾಖೆ ಈ ಸಂಬಂಧ ಆದೇಶ ಹೊರಡಿಸಿದ್ದು, ಯಾವುದೇ ಸರಕಾರಿ ನೌಕರನು ಕಚೇರಿಗಳಲ್ಲಿ ಹಾಗೂ ಕಚೇರಿ ಆವರಣದಲ್ಲಿ ಧೂಮಪಾನ ಸೇರಿದಂತೆ ಯಾವುದೇ ತಂಬಾಕು ಉತ್ಪನ್ನಗಳ ಸೇವನೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಧೂಮಪಾನ ಹಾಗೂ ತಂಬಾಕಿನ ಇತರೆ ಉತ್ಪನ್ನಗಳ ಸೇವನೆ ಆರೋಗ್ಯಕ್ಕೆ ಮಾರಕವಾಗಿದ್ದು, ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು, 2021ರ ನಿಯಮ–31ರಲ್ಲಿ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಮಾದಕ ಪಾನೀಯ ಅಥವಾ ಮಾದಕ ವಸ್ತುವನ್ನು ಸೇವಿಸುವುದನ್ನು ಕೂಡ ನಿಷೇಧಿಸಲಾಗಿದೆ.

ಈ ಸಂಬಂಧ ಎಚ್ಚರಿಕೆಯ ಫಲಕವನ್ನು ಕಚೇ–ರಿಯ ಸೂಕ್ತ ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು ಎಂದು ಸೂಚಿಸಲಾಗಿದೆ.

ಈ ಸೂಚನೆಗಳನ್ನು ಉಲ್ಲಂಘಿಸಿದರೆ ಅಂತಹ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಆದ–ೇಶದಲ್ಲಿ ಉಲ್ಲೇಖಿಸಲಾಗಿದೆ.

## ವಕ್ಫ್ ಆಸ್ತಿ ವಿವಾದ: ಹುಬ್ಬಳ್ಳಿ- ವಿಜಯಪುರಕ್ಕೆ ಜೆಪಿಸಿ ಅಧ್ಯಕ್ಷ ಜಗದಾಂಬಿಕಾ ಪಾಲ್ ಭೇಟಿ

# ರೈತರಿಂದ 500 ಅಹವಾಲು ಸ್ವೀಕಾರ



ಹುಬ್ಬಳ್ಳಿ/ವಿಜಯಪುರ: ವಕ್ಫ್ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಸಂಸದ ಜಗದಾಂಬಿಕಾ ಪಾಲ್ ಅಧ್ಯಕ್ಷತೆಯ ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆಯ ಜಂಟಿ ಸಂಸದೀಯ ಸಮಿತಿಯು ಶುಕ್ರವಾರ ಸುಮಾರು 500 ಅಹವಾಲುಗಳನ್ನು ಆಲಿಸಿತು.

ಹುಬ್ಬಳ್ಳಿ, ವಿಜಯಪುರ ಮತ್ತು ಬೆಳಗಾವಿಗೆ ಭೇಟಿ ನೀಡಿದ ಪಾಲ್, ರೈತರು ಹಾಗೂ ವಿವಿಧ ಸಾಮಾಜಿಕ ಸಂಘಟನೆಗಳ ಸದಸ್ಯರನ್ನು ಭೇಟಿ ಮಾಡುವ ಮೂಲಕ ವಕ್ಫ್ ಭೂಮಿ ವಿವಾದಕ್ಕೆ ಸಂಬಂಧಿಸಿದಂತೆ ಅಹವಾಲು ಸ್ವೀಕರಿಸಿದರು.

ಈ ವೇಳೆ ತಮ್ಮ ಭೂಮಿಯನ್ನು ವಕ್ಫ್ ಮಂಡಳಿ ಆಸ್ತಿ ಎಂದು ಹೇಳಲಾಗುತ್ತಿದೆ ಎಂದು ವಿಜಯಪುರ, ಬೀದರ್, ಕಲಬುರಗಿ, ಹುಬ್ಬಳ್ಳಿ, ಬಾಗಲಕೋಟೆ ಮತ್ತು ಬೆಳಗಾವಿಯ ರೈತರಿಂದ ಸುಮಾರು 500 ಅಹವಾಲುಗಳನ್ನು ಜಗದಾಂಬಿಕಾ ಪಾಲ್ ಸ್ವೀಕರಿಸಿದರು ಎಂದು ಸಂಸದ ತೇಜಸ್ವಿ ಸೂರ್ಯ ಅವರ ಕಚೇ–ರಿಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸತ್ಯ ಶೋಧನೆ ಮತ್ತು ನೊಂದವರನ್ನು ಭೇಟಿ ಮಾಡಲು ರಾಜ್ಯಕ್ಕೆ ಭೇಟಿ ನೀಡಿದ್ದೇನೆ. ರೈತರು ಹಾಗೂ ವಿವಿಧ ಸಂಘಟನೆಗಳಿಂದ ಸಂಬಂಧಿಸಿದ ದಾಖಲೆಗಳು, ಮನವಿ ಪತ್ರಗಳನ್ನು ಸ್ವೀಕರಿಸಿದ್ದು, ಅವೆಲ್ಲವನ್ನೂ ಜಂಟಿ ಸಂಸದೀಯ ಸಮಿತಿಯಲ್ಲಿ ಚರ್ಚಿಸಿ ವರದಿಯಲ್ಲಿ ಸೇರಿಸಲಾಗುವುದು ಎಂದು ಜಗದಾಂಬಿಕಾ ಪಾಲ್ ಭರವಸೆ ನೀಡಿದರು.

ರೈತರ ಭೂಮಿ ತೆರವುಗೊಳಿಸದಂತೆ ರಾಜ್ಯ ಸರಕಾರ ಕಂದಾಯ ಇಲಾಖೆ ಅಧಿಕಾ–ರಿಗಳಿಗೆ ನಿರ್ದೇಶನ ನೀಡಿದ್ದರೂ ಸಮಸ್ಯೆ ಬಗೆಹರಿಯುವುದೇ? ದಾಖಲೆ ತಿದ್ದುವಿಕೆ, ಮ್ಯುಟೇಶನ್, ವಕ್ಫ್ ದಾಖಲೆ ಬದಲಾವಣೆ ಮಾಡಿರುವುದು ಖಾತ್ರಿಯಾಗಿದೆ. ರಾಜ್ಯ ಸರಕಾರ ಏನು ಮಾಡುತ್ತಿದೆ. ಇದಕ್ಕೆ ಯಾರು ಹೊಣೆ?" ಎಂದು ಅವರು ಪ್ರಶ್ನಿಸಿದರು.

ನಂತರ ವಿಜಯಪುರದಲ್ಲಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಜಗದಾಂಬಿಕಾ ಪಾಲ್, ಪಾಲ್, ವಕ್ಫ್ ಅದಾಲತ್ ನಡೆಸಿ, ವಕ್ಫ್ ಆಸ್ತಿ ಎಂದು ನಿರ್ಧರಿಸಲು "ಪಾರದರ್ಶಕ ವಕ್ಫ್ ಕಾನೂನು ಜಾರಿಗೆ ಬರುತ್ತಿರುವಾಗ ಇದನ್ನು ಮಾಡುವ ಆತುರವೇನಿತು? ರೈತರು, ವಿವಿಧ ಸಂಘಟನೆಗಳು ಮನವಿ ಸಲ್ಲಿಸಿದ್ದು, ಇಂತಹ ಘಟನೆಗಳು ರಾಜ್ಯದಲ್ಲಿ ಏಕೆ ನಡೆದಿದೆ ಎಂಬುದರ ಬಗ್ಗೆ ರಾಜ್ಯ ಸರ್ಕಾರ ಉತ್ತರ ನೀಡಬೇಕಾಗಿದೆ ಎಂದರು.

1920 ಮತ್ತು 1930ರಿಂದ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಕಾನೂನು ಜಾರಿಯಾಗುವ ಮುನ್ನವೇ ನೋಟಿಸ್ ನೀಡುತ್ತಿರುವುದು ಏಕೆ? ನೋಟಿಸ್ ನೀಡುವುದರ ಜೊತೆಗೆ ಆರ್‌ಟಿಸಿ,ಪಹಣಿ ಮತ್ತು ಮ್ಯುಟೇಶನ್ ರಿಜಿಸ್ಟರ್‌ಗಳಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ ಎಂದು ರೈತರು ಹೇಳಿಕೊಂಡಿದ್ದಾರೆ. ಕರ್ನಾಟಕ ವಕ್ಫ್ ಮಂಡಳಿಯು ರಾಜ್ಯಾದ್ಯಂತ ಕನಿಷ್ಠ 53 ಐತಿಹಾಸಿಕ ಪುರಾತತ್ವ ಸಮೀಕ್ಷೆ ಸಂರಕ್ಷಿತ ಸ್ಥಳಗಳನ್ನು ಕೂಡಾ ತಮ್ಮ ಆಸ್ತಿ ಎಂದು ಹೇಳಿಕೊಂಡಿದೆ. ಇದು ವಕ್ಫ್ ಆಸ್ತಿ ಹೇಗೆ? ಎಂದು ಪ್ರಶ್ನಿಸಿದರು.

ಮತ್ತೊಂದೆಡೆ ಪಾಲ್ ರಾಜ್ಯ ಭೇಟಿಯನ್ನು 'ನಾಟಕ ಕಂಪನಿಯ ಟೂರ್' ಮತ್ತು ರಾಜಕೀಯ ಪ್ರೇರಿತ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದ್ದಾರೆ. ರಾಜ್ಯದಲ್ಲಿ ನಡೆಯುತ್ತಿರುವ ಮೂರು ಕ್ಷೇತ್ರಗಳ ಉಪಚುನಾವಣೆ ಹಾಗೂ ನೆರೆಯ ಮಹಾರಾಷ್ಟ್ರದಲ್ಲಿನ ವಿಧಾನಸಭೆ ಚುನಾವಣೆ ಮೇಲೆ ಕಣ್ಣಿಟ್ಟು ಪಾಲ್ ರಾಜ್ಯಕ್ಕೆ ಭೇಟಿ ನೀಡಿದ್ದಾರೆ. ಏಕಅ ಅಧ್ಯಕ್ಷರು ರಾಜ–ಕೀಯ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದು, ಇದು ಜಂಟಿ ಸಂಸದೀಯ ಸಮಿತಿ ಭೇಟಿ ಅಲ್ಲ, ಬಿಜೆಪಿ ಸದಸ್ಯರು ಬಂದಿದ್ದು, ರಾಜ–ಕೀಯ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಸಂಸದೀಯ ಸಮಿತಿ ಭೇಟಿ ನೀಡಿದ್ದಂತೆ ಕಾಣುತ್ತಿಲ್ಲ. ಅಧ್ಯಕ್ಷರು ನಿಯಮ ಮೀರಿ ಏಕಾಂಗಿಯಾಗಿ ಭೇಟಿ ನೀಡುತ್ತಿರುವುದು ರಾಜಕೀಯ ಪ್ರೇರಿತ ಭೇಟಿ ಅನಿಸುತ್ತದೆ. ಸಮಿತಿಯ ಸದಸ್ಯರು ಕೂಡ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಮಿತಿಯಲ್ಲಿ ಭೇಟಿಯನ್ನು ನಿರ್ಧರಿಸಬೇಕು, ಏಕಪಕ್ಷೀಯವಾಗಿ ಭೇಟಿ ನೀಡಲು ಸಾಧ್ಯವಿಲ್ಲ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.

ಮೊದಲಿಗೆ ವಿಜಯಪುರ ಜಿಲ್ಲೆಯ ಒಂದು ಭಾಗದ ರೈತರು ತಮ್ಮ ಜಮೀನುಗಳನ್ನು ವಕ್ಫ್ ಆಸ್ತಿ ಎಂದು ಗುರುತಿಸಲಾಗಿದೆ ಎಂಬ ಆರೋಪ ಮಾಡಿದ್ದರು. ತದನ ನಂತರ ಇತರ ಕೆಲವು ಸ್ಥಳಗಳಿಂದ ಇದೇ ರೀತಿಯ ಆರೋಪಗಳು ಬಂದಿವೆ.

ಮಠಗಳಂತಹ ಕೆಲವು ಸಂಘಟನೆಗಳು ಮತ್ತು ಧಾರ್ಮಿಕ ಸಂಸ್ಥೆಗಳು ಕೂಡ ಇದೇ ರೀತಿಯ ಆರೋಪಗಳನ್ನು ಮಾಡುತ್ತಿವೆ. ಗಲಾಟೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರೈತ–ರಿಗೆ ನೀಡಿರುವ ಎಲ್ಲಾ ನೋಟಿಸ್‌ಗಳನ್ನು ತಕ್ಷಣವೇ ಹಿಂಪಡೆಯಬೇಕು ಮತ್ತು ಯಾವುದೇ ಸೂಚನೆ ಇಲ್ಲದೆ ಭೂ ದಾಖಲೆಗಳಲ್ಲಿ ಅನಧಿಕೃತ ತಿದ್ದುಪಡಿಗಳನ್ನು ರದ್ದುಗೊಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

## ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಓದುವ ಮಕ್ಕಳ ಪ್ರೋತ್ಸಾಹ ಧನ 1 ರಿಂದ 2 ಲಕ್ಷ ರೂ.ಗೆ ಹೆಚ್ಚಳ: ಸಚಿವ ಮಹದೇವಪ್ಪ



ಬೆಂಗಳೂರು: ಐಐಟಿ, ಐಐಎಂ, ಐಐಎಸ್ಸಿ, ಎನ್‌ಐ–ಟಿಯಂತಹ ರಾಷ್ಟ್ರೀಯ ಸಂಸ್ಥೆಗಳಲ್ಲಿ ಓದುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಪ್ರೋತ್ಸಾಹ ಧನವನ್ನು 1 ರಿಂದ 2 ಲಕ್ಷಕ್ಕೆ ಹೆಚ್ಚಳ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಪಿಯುಸಿ ಪರೀಕ್ಷೆಯಲ್ಲಿ 95ಕ್ಕೂ ಹೆಚ್ಚಿನ ಅಂಕಗಳನ್ನು ಪಡೆದು, ನೀಟ್ ಪ್ರವೇಶ ಪರೀಕ್ಷೆಯ ಮೂಲಕ ಸರ್ಕಾರಿ ಕೋಟಾದಡಿ ಪ್ರವೇಶ ದೊರಕದೇ ಮ್ಯಾನೇಜ್ ಮೆಂಟ್ ಕೋಟಾದಡಿ ಎಂಬಿಬಿಎಸ್ ಕೋರ್ಸ್ ಗೆ ಸೀಟು ಪಡೆದುಕೊಂಡ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ 25 ಲಕ್ಷ ರೂಪಾಯಿಗಳ ಶುಲ್ಕ ಧನವನ್ನು ಒದಗಿಸಲು ಸರ್ಕಾರ ತೀರ್ಮಾನಿಸಿದೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್. ಸಿ. ಮಹದೇವಪ್ಪ ತಿಳಿಸಿದರು.

ಎಂಬಿಬಿಎಸ್ ಪದವಿಯನ್ನು ಪಡೆಯುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಮೊದಲ ವರ್ಷ ಶೇ 60ರಷ್ಟಕ್ಕೂ ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದರೆ ಅವರಿಗೆ ಮತ್ತೆ 25 ಲಕ್ಷ ರೂಪಾಯಿಗಳ ಪ್ರೋತ್ಸಾಹ ಧನವನ್ನು ನೀಡಲಾಗುವುದು. ಶಿಕ್ಷಣವೇ ಸಮಾಜವನ್ನು ಬದಲಿಸುವ ಕೀಲಿಕೈ ಎಂಬ ಅಂಶವನ್ನು ಮನಗಂಡು ಈ ಒಂದು ಮಹತ್ವದ ಘೋಷಣೆಯನ್ನು ಸರ್ಕಾರ ಮಾಡಿದ್ದು, ಇದರಿಂದ ಉನ್ನತ ಶಿಕ್ಷಣ ಮಾಡಬೇಕೆಂಬ ವಿದ್ಯಾರ್ಥಿಗಳ ಕನಸು ನನಸಾಗಲಿದೆ ಎಂದಿದ್ದಾರೆ.

ಇನ್ನು ಬಡತನದ ಬೇಗೆಗೆ ಸಿಲುಕಿ ಎಂಬಿಬಿ–ಎಸ್ ಓದುವ ಬಯಕೆ ಇರುವಂತಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರಿ ಕೋಟಾದಡಿ ಸೀಟು ಸಿಗದೇ ಅವರು ಖಾಸಗಿ ಸಂಸ್ಥೆಗಳಲ್ಲಿ ಓದುತ್ತಿದ್ದರೆ, ಅಂತಹ ಪ್ರತಿಭಾವಂತ ಮಕ್ಕಳ ಶುಲ್ಕವನ್ನು ಸರ್ಕಾರ ಭರಿಸಲಿದ್ದು, ಇದಕ್ಕಾಗಿ ಆರಂಭಿಕವಾಗಿ 25 ಲಕ್ಷ ರೂಪಾಯಿಗಳನ್ನು ನೀಡುವ ನಿರ್ಧಾರವನ್ನು ತೆಗೆದುಕೊಂಡಿರುವುದಾಗಿ ಸಚಿವ ಮಾಹಿತಿ ನೀಡಿದರು.

## ಭಗವದ್ಗೀತೆ ಅಭಿಯಾನ ಒಂದು ಪವಿತ್ರ ಕಾರ್ಯ

# ಸ್ವಾಮಿ ಮೋಕ್ಷಾತ್ಮಾನಂದ ಮಹಾರಾಜ



**ಬೆಳಗಾವಿ** : ಶಿರಸಿಯ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ ಕಳೆದ 18 ವರ್ಷಗಳಿಂದ ನಡೆಸುತ್ತಿರುವ ಭಗವದ್ಗೀತೆ ಅಭಿಯಾನ ಒಂದು ಪವಿತ್ರ ಕಾರ್ಯವಾಗಿದ್ದು, ಇದರಿಂದ ಭಾರತಕ್ಕೆ ಅಂತ್ಯ ಇಲ್ಲ ಎನ್ನುವುದು ಖಾತ್ರಿಯಾಗಿದೆ ಎಂದು ರಾಮಕೃಷ್ಣ ಮಿಶನ್ ಆಶ್ರಮದ ಸ್ವಾಮೀಜಿ ಶ್ರೀ ಮೋಕ್ಷಾತ್ಮಾನಂದ ಮಹಾರಾಜ ಅಭಿಪ್ರಾಯಪಟ್ಟಿದ್ದಾರೆ.

ಭಗವದ್ಗೀತೆ ಅಭಿಯಾನದ ಬೆಳಗಾವಿ ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಗುರುವಾರ ಇಲ್ಲಿಯ ಸಂತ ಮೀರಾ ಶಾಲೆಯ ಮಾಧವ ಶಾನಭಾಗ ಸಭಾಭವನದಲ್ಲಿ ಉದ್ಘಾಟಿಸಿ ಅವರು ಆಶೀರ್ವಚನ ನೀಡುತ್ತಿದ್ದರು.

ಭಗವಂತನ ಮೂರು ಸೃಷ್ಟಿಗಳಲ್ಲಿ ಭಗವದ್ಗೀತೆಯೂ ಒಂದು. ಪ್ರಪಂಚ, ಮನುಷ್ಯ ಮತ್ತು ಭಗವದ್ಗೀತೆ ಇವು ಅದ್ಭುತ ಸೃಷ್ಟಿಗಳು. ಭಗವಂತ ಇರುವುದಕ್ಕೆ ಈ ಪ್ರಪಂಚವೇ ಸಾಕ್ಷಿ ಎಂದು ಅವರು ಹೇಳಿದರು.

ಮೊಬೈಲ್ ಇಂದು ಮನುಷ್ಯನನ್ನು ನಾಶ ಮಾಡುತ್ತಿದೆ. ಅಮೇರಿಕಾದಲ್ಲಿ ಗ್ಯಾಂಬ್ಲಿಂಗ್ ತತ್ವದ ಮೇಲೆ ಮೊಬೈಲ್ ಕಂಡು ಹಿಡಿಲಾಗಿದೆ. ಒಮ್ಮೆ ಬಳಸಲು ಆರಂಭಿಸಿದರೆ ಹೊರಬರುವುದೇ ಕಷ್ಟವಾಗಿದೆ. ಹಾಗಾಗಿ ಸಾಧ್ಯವಾದಷ್ಟು ಅದ–ರಿಂದ ದೂರವಿರಬೇಕು. ಮಕ್ಕಳು ಪದವಿ ಮುಗಿಯುವವರೆಗೆ ಮನರಂಜನೆಗಾಗಿ ಮೊಬೈಲ್ ಬಳಸುವುದನ್ನು ನಿಲ್ಲಿಸಬೇಕು. ನಿತ್ಯ ಧ್ಯಾ ನ ಮಾಡುವ ಮೂಲಕ ಮಕ್ಕಳು ತಮ್ಮ ಸರ್ವತೋಮುಖ ಬೆಳವಣಿಗೆ ಮಾಡಿಕೊಳ್ಳಬೇಕು ಎಂದು ಸ್ವಾಮೀಜಿ ಕಿವಿ ಮಾತು ಹೇಳಿದರು.

ಹಿರಿಯ ಸಾಹಿತಿ ಡಾ.ಬಸವರಾಜ ಜಗಜಂಪಿ ಮಾತನಾಡಿ, ಭಗವದ್ಗೀತೆ ಒಂದು ಅಪೂರ್ವ ಗ್ರಂಥ. ನಮ್ಮ ತಂದೆ– ತಾಯಿ ಮಾಡಿಟ್ಟಿರುವ ಆಸ್ತಿಗಳು ಚರ ಆಸ್ತಿಗಳಾದರೆ ಭಗವದ್ಗೀತೆ ಮತ್ತು ಭಗವದ್ಗಾತೆ ಅಭಿಯಾನ ನಮ್ಮ ಮಕ್ಕಳಿಗಾಗಿ ಮಾಡುತ್ತಿರುವ ಸ್ಥಿರ ಆಸ್ತಿ, ಇದು ಎಂದೆಂದೂ ನಾಶವಾಗದು ಎಂದು ಬಣ್ಣಿಸಿದರು.

ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆ ಪವಿತ್ರ ಗ್ರಂಥ, ಎಲ್ಲರನ್ನೂ ಮುನ್ನಡೆಸುವ ಶಕ್ತಿ ಅದಕ್ಕಿದೆ. ಅತ್ಯಂತ ಉದಾತ್ತ ವಿಚಾರಗಳು ಅದರಲ್ಲಿವೆ. ದುಃಖದಲ್ಲಿದ್ದವ–ರಿಗೆ ಸಾಂತ್ವನ ಹೇಳುವ, ಕಷ್ಟದಲ್ಲಿದ್ದವರಿಗೆ ಶಕ್ತಿ ತುಂಬುವ ಸಾಮರ್ಥ್ಯ ಭಗವದ್ಗೀತೆಗಿದೆ. ಎಲ್ಲರಿಗೂ ಮಾರ್ಗದರ್ಶನ ನೀಡುವ ಮೌಲ್ಯಗಳ ಖಜಾನೆ ಅದು ಎಂದು ಅವರು ಹೇಳಿದರು.

ಇಂದು ಮೊಬೈಲ್ ನಮ್ಮನ್ನು ಆವರಿಸಿದೆ. ಅದರಿಂದ ನಮ್ಮ ವ್ಯಕ್ತಿತ್ವ ಕುಬ್ಜವಾಗುತ್ತಿದೆ. ಸಕಾರಾತ್ಮಕ ಚಿಂತನೆ ಮೂಲಕ, ಇರುವ ಭಾಗ್ಯವನ್ನು ನೆನೆದು ವ್ಯಕ್ತಿಗಳನ್ನು ರೂಪಿಸುವ ಮೂಲಕ ರಾಷ್ಟ್ರ ಕಟ್ಟಬೇಕಿದೆ. ಅದ್ಭುತ ಚಿಂತನೆ ಮೂಲಕ ನಡೆಯುವ ಇಂತಹ ಅಭಿಯಾನದಿಂದ ಅದು ಸಾಧ್ಯವಿದೆ. ಎಲ್ಲ ಆಯಾಮಗಳಿಂದ ಒಳ್ಳೆಯ ವಿಚಾರಗಳು ಬರಲಿ, ಪ್ರಯತ್ನ ಮಾಡು, ಫಲ ಬಯಸಬೇಡ ಎನ್ನುವ ಸಂದೇಶಗಳನ್ನು ಭಗವದ್ಗೀತೆಯಲ್ಲಿ ನೀಡಲಾಗಿದೆ. ಜಯ ಅಪಜಯ, ಲಾಭ ನಷ್ಟ ಎಲ್ಲವನ್ನೂ ಮೀರಿ ಕೆಲಸ ಮಾಡಬೇಕು ಎಂದು ಜಗಜಂಪಿ ಸಲಹೆ ನೀಡಿದರು.

ಖ್ಯಾತ ಉದ್ಯಮಿ ಗೋಪಾಲ ಜಿನಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಭಗವದ್ಗೀತೆ ಅಭಿಯಾನ ಸಮಿತಿಯ ಕಾರ್ಯಾಧ್ಯಕ್ಷ ಪರಮೇಶ್ವರ ಹೆಗಡೆ ಸ್ವಾಗತಿಸಿದರು, ಸಂಚಾಲಕ ಸುಬ್ರಹ್ಮಣ್ಯ ಭಟ್ ನಿರೂಪಿಸಿದರು. ಕಾರ್ಯದರ್ಶಿ ಎಂ.ಕೆ.ಹೆಗಡೆ ವಂದಿಸಿದರು. ಆರಂಭದಲ್ಲಿ ವಿದ್ಯಾರ್ಥಿಗಳಿಂದ ಸರಸ್ವತಿ ವಂದನಾ, ಮಾತೆಯರಿಂದ ಧ್ಯಾನ ಶ್ಲೋಕ ಮತ್ತು

## ಹಳ್ಳೂರ : ರೈತ ಉತ್ಪಾದಕ ಕಂಪನಿಯ ಅನ್ನದಾತ ಅರಶಿನ ಪುಡಿ ಉತ್ಪಾದನಾ ಘಟಕ ಉದ್ಘಾಟನೆ



ಮೂಡಲಗಿ: ರೈತರು ಬೆಳೆದ ಫಸಲನ್ನು ಮೌಲ್ಯವರ್ಧನೆ ಮಾಡುವ ಮೂಲಕ ನೇರ ಮಾರುಕಟ್ಟೆ ಒದಗಿಸುವ ಹಿನ್ನಲೆಯಲ್ಲಿ ರಾಜ್ಯದ ಬಿಜೆಪಿ ಸರಕಾರವು 750 ರೈತ ಉತ್ಪಾದಕ ಸಂಸ್ಥೆಗಳನ್ನು ಸ್ಥಾಪನೆ ಮಾಡಿ ಒಟ್ಟು ರೂ 225 ಕೋಟಿ ಅನುದಾನ ಬಿಡುಗಡೆ ಮಾಡಲಾಗಿತ್ತು. ಆದರೆ ಕಾಂಗ್ರೇಸ್ ಸರ್ಕಾರ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಒಂದೇ ಒಂದು ಬಿಡಿಗಾಸನ್ನು ಬಿಡುಗಡೆ ಮಾಡದೇ ಈ ರೈತ ಉತ್ಪಾದಕ ಸಂಸ್ಥೆಯ ಆಶೆಯಗಳಿಗೆ ತಿಲಾಂಜಲಿ ನೀಡಿದೆ. ಇದು ಕಾಂಗ್ರೇಸ್ ಸರ್ಕಾರದ ರೈತ ವಿರೋಧಿ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ನ–07 ರಂದು ಹಳ್ಳೂರ ಗ್ರಾಮದ ಹಳ್ಳೂರ ರೈತ ಉತ್ಪಾದಕ ಕಂಪನಿಯ ಅನ್ನದಾತ ಅರಶಿನ ಪುಡಿ ಉತ್ಪಾದನಾ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು ಈ ಅರಶಿನ ಪುಡಿ ಘಟಕ ನಿರ್ಮಾಣಕ್ಕೆ ಆಯ್.ಸಿ. ಆಯ್.ಸಿ ಬ್ಯಾಂಕ್ ಸುಮಾರು 20 ಲಕ್ಷ ರೂಪಾಯಿಗಳ ಅನುದಾನವನ್ನು ನೀಡುವ ಮೂಲಕ ಈ ಭಾಗದ ರೈತರ ನೆರವಿಗೆ ಬಂದಿರುವುದು ಅತ್ಯಂತ ಶ್ಲಾಘನೀಯ ಕಾರ್ಯವೆಂದು ಕೊಂಡಾಡಿದರು.

ಇದುವರೆಗೆ ರೈತ ತಾನು ಬೆಳೆದ ಫಸಲಿಗೆ ಒಂದು ನೂರು ರೂಪಾಯಿ ಬೆಲೆ ಬಂದರೆ ಅದರಲ್ಲಿ ಕೇವಲ 30 ರೂಪಾಯಿ ಮಾತ್ರ ರೈತನಿಗೆ ಸಿಗುತ್ತದೆ. ಉಳಿದ 70 ರೂಪಾಯಿ ಮಧ್ಯವರ್ತಿಗಳ ಪಾಲಾಗುತ್ತಿತ್ತು ಅದನ್ನು ಹೋಗಲಾಡಿಸುವ ಹಿನ್ನಲೆಯಲ್ಲಿ ರೈತ ತಾನು ಬೆಳೆದ ಫಸಲನ್ನು ಮೌಲ್ಯವರ್ಧನೆ ಮಾಡುವ ಮೂಲಕ ಉದ್ಯಮಿಯಾಗಬೇಕು ಜೊತೆಗೆ ವ್ಯಾಪಾರಿಯಾಗಬೇಕು ಹಾಗಾದಾಗ ಮಾತ್ರ ರೈತನು ಬೆಳೆದ ಫಸಲಿಗೆ ಯೋಗ್ಯ ಬೆಲೆ ಸಿಗಬಹುದು. ಇದು ರೈತ ಉತ್ಪಾದಕ ಸಂಸ್ಥೆಗಳನ್ನು ಕಟ್ಟಿಬೆಳೆಸುವುದರಿಂದ ಮಾತ್ರ ಸಾಧ್ಯವಿದೆ ಎಂದು ಹೇಳಿದರು.

ನೋಂದಣಿಯಾದ ರೈತರಿಂದ ಷೇರುಗಳನ್ನು ಸಂಗ್ರಹಿಸಿ, ಸಂಘದ ಸದಸ್ಯರಿಗೆ ನೇರ ಮಾರುಕಟ್ಟೆ ಸೌಲಭ್ಯಗಳ ಬೆಂಬಲ ನೀಡುವುದು, ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಿ ಸೂಕ್ತ ಬೆಲೆ ದೊರಕಿಸಿಕೊಡಲು ಇಂತಹ ರೈತ ಉತ್ಪಾದಕ ಸಂಸ್ಥೆಗಳನ್ನು ಇಡಿ ರಾಜ್ಯಾದ್ಯಂತ ಬೆಳೆಸಿ, ಉಳಿಸಬೇಕಾಗಿದೆ ಆ ಮೂಲಕ ರೈತರ ಆದಾಯ ದ್ವಿಗುಣ ಮಾಡಲು ಇದು ಒಂದು ವೇದಿಕೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಬೆಂಡವಾಡ ವಿರಕ್ತಮಠದ ಪೂಜ್ಯ ಶ್ರೀ ಗುರುಸಿದ್ದ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಶ್ರೀಕಾಂತ ಕೌಜಲಗಿ ಅಧ್ಯಕ್ಷತೆ ವಹಿಸಿದ್ದರು. ಎಫ.ಪಿ.ಓ ಸಿಇಓ ಮಂಜುನಾಥ ಬೆಳಗಲಿ ಸ್ವಾಗತಿಸಿದರು, ಮುರಿಗೆಪ್ಪ ಮಾಲಗಾರ ಕಾರ್ಯಕ್ರಮ ನಿರೂಪಿಸಿದರು ಮಹಾಂತೇಶ ಗಿರೆಣ್ಣವರ ವಂದಿಸಿದರು.

ಮಲ್ಲನಗೌಡ ಪಾಟೀಲ, ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ ಜನಮಟ್ಟಿ, ಆಯ್.ಸಿ. ಆಯ್.ಸಿ ಬ್ಯಾಂಕ್ ಮ್ಯಾನೇಜರ ರೋಹಿತ ರೆಡ್ಡಿ, ಪ್ರೋಜೆಕ್ಟ ಅಧಿಕಾರಿ ರಾಜೇಸಾಬ ಶಿಕಾರಿ, ಪಿ.ಡಿ.ಒ ರಂಗಣ್ಣ ಗುಜನಟ್ಟಿ, ಗ್ರಾಮ ಪಂಚಾಯತ ಸದಸ್ಯ ಬಸವರಾಜ ಲೋಕನ್ನವರ, ಮಹಾದೇವ ಮಸರಗುಪ್ಪಿ, ಹಣಮಂತ ಗೋಡಿಗೌಡರ, ಪರಮಾನಂದ ಶೇಡಬಾಳಕರ, ಈರಣ್ಣ ಕೌಜಲಗಿ, ಬಾಬು ಅಂಗಡಿ, ಶ್ರೀಶೈಲ ಕೌಜಲಗಿ, ಸದಾಶಿವ ಮಾವರಕರ ಪ್ರಗತಿ ರೈತರಾದ ದುಂಡಪ್ಪ ಕೊಂಗಾಲಿ, ಶಂಕರ ಅಂಗಡಿ, ಸೇ–ರಿದಂತೆ ಸಂಸ್ಥೆಯ ನಿರ್ದೇಶಕರು, ಸ್ಥಳೀಯ ಮುಖಂಡರು ಹಾಗೂ ರೈತರು ಉಪಸ್ಥಿತರಿದ್ದರು.

## ರೈತರಿಗೆ ಹಣ ಪಾವತಿಯಲ್ಲಿ ವಿಳಂಬ ಮಾಡುವ ಸಕ್ಕರೆ ಕಾರ್ಖಾನೆಗಳ ಮೇಲೆ ಕಠಿಣ ಕ್ರಮದ ಎಚ್ಚರಿಕೆ

# ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವ ಕಾರ್ಯ ಆರಂಭಿಸಲಿ

**ವಿಜಯಪುರ:** ಜಿಲ್ಲೆಯಲ್ಲಿರುವ ಎಲ್ಲ ಸಕ್ಕರೆ ಕಾರ್ಖಾನೆಗಳು ಪ್ರಸಕ್ತ ಸಾಲಿನ ಹಂಗಾಮಿಗೆ ಸರ್ಕಾರದ ಆದೇಶದಂತೆ ಕಬ್ಬು ನುರಿಸುವ ಕಾರ್ಯ ಆರಂಭಿಸುವಂತೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಸೂಚನೆ ನೀಡಿದ್ದಾರೆ.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಸರ್ಕಾರದ ಆದೇಶದಂತೆ ಕಬ್ಬು ನುರಿಸುವ ಕಾರ್ಯ ಆರಂಭಿಸಬೇಕು. ಬಸವೇಶ್ವರ ಸಕ್ಕರೆ ಕಾರ್ಖಾನೆ ಕಬ್ಬು ಒದಗಿಸಿದ ರೈತ–ರಿಗೆ ಬಿಲ್ಲು ಪಾವತಿಯಲ್ಲಿ ವಿಳಂಬ, ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಕಬ್ಬು ನು–ರಿಸುವುದು ಸೇರಿದಂತೆ ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಬಸವೇಶ್ವರ ಸಕ್ಕರೆ ಕಾರ್ಖಾನೆಗೆ ಕಬ್ಬು ನುರಿಸುವುದು ತಡೆಹಿಡಿಯಲಾಗಿದೆ ಎಂದು ತಿಳಿಸಿದ ಅವರು, ಉಳಿದಂತೆ ಎಲ್ಲ ಕಾರ್ಖಾನೆಗಳು ಕಬ್ಬು ನುರಿಸುವ ಕಾರ್ಯ ಆರಂಭಿಸಿ, ಕಬ್ಬು ಒದಗಿಸಿದ ರೈತರಿಗೆ ಯಾವುದೇ ವಿಳಂಬ ಮಾಡದೇ ನಿಗದಿತ 14 ದಿನಗಳೊಳಗಾಗಿ ಬಿಲ್‌ನ್ನು ಪಾವತಿಸಲು ಕ್ರಮ ವಹಿಸುವಂತೆ ಅವರು ಸೂಚನೆ ನೀಡಿದರು.

ಕಬ್ಬು ನುರಿಸುವ ಮೊದಲು ಎಲ್ಲ ಸಕ್ಕರೆ ಕಾರ್ಖಾನೆಗಳು ತೂಕದ ಯಂತ್ರಗಳು ಡಿಜಿಟಲೀಕರಣಗೊಂಡಿರುವ ಕುರಿತು ಪರಿಶೀಲನೆ ನಡೆಸಿ ವರದಿ ಸಲ್ಲಿಸಬೇಕು. ಖಿಜಿಟಲೀಕರಣಗೊಳ್ಳದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ನು–ರಿಸಲು ಅವಕಾಶ ನೀಡುವುದಿಲ್ಲ ಎಂದು ತಿಳಿಸಿದ ಅವರು, ಸ್ಕ್ಯಾಪಿಂಗ್ ಕಾರ್ಯ



ಪೂರ್ಣಗೊಂಡಿರಬೇಕು. ಪಕ್ವವಾಗಿರುವ ಕಬ್ಬನ್ನು ಆದ್ಯತೆಯ ಮೇರೆಗೆ ಕಟಾವು ಮಾಡಿ ನುರಿಸಬೇಕು. ಕೆಎಸ್‌ಪಿಸಿಬಿಯಿಂದ ನಿರ್ಧರಿತ ಕಾರ್ಖಾನೆ ನುರಿಸುವ ಸಾಮಥ–್ರ್ಯಕ್ಕನುಗುಣವಾಗಿ ಮಾತ್ರ ಕಬ್ಬು ನುರಿಸಬೇಕು. ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಕಬ್ಬು ನು–ರಿಸದಂತೆ ಅವರು ಎಚ್ಚರಿಕೆ ನೀಡಿದ್ದಾರೆ. ಜಿಲ್ಲೆಯಲ್ಲಿ ಬ್ಯಾಂಕ್ ಖಾತೆ ಹೊಂದಿರಬೇಕು. ಈ ಖಾತೆಯಿಂದಲೇ ಸಕ್ಕರೆ, ಮಾರಾಟ ವ್ಯವಹಾರ ನಿರ್ವಹಣೆಯಾಗಬೇಕು. ಈ ಕು–ರಿತು ಆಹಾರ ಮತ್ತು ನಾಗರಿಕರ ಸಬರಾಜು ಇಲಾಖೆ ಉಪನಿರ್ದೇಶಕರು ದೃಢೀಕರಣ ಮಾಡುವಂತೆ ತಿಳಿಸಿದರು. ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಗೆ ಉಪವಿಭಾಗಾಧಿಕಾ–ರಿಗಳು, ಆಹಾರ ಮತ್ತು ನಾಗರಿಕರ ಸಬರಾಜು ಇಲಾಖೆ ಉಪನಿರ್ದೇಶಕರು ಕಾಲಕಾಲಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಕಬ್ಬು ನುರಿಸುವ ಕಾರ್ಖಾನೆಗಳು ಎಲ್ಲ ನಿಯಮಗಳನು ಪಾಲಿಸುತ್ತಿರುವ ಕುರಿತು ಪರಿಶೀಲನೆ ನಡೆಸುವಂತೆ ಅವರು ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವ–ರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ ಅವರು ಮಾತನಾಡಿ,ರೈತರಿಗೆ ಬಿಲ್ ಪಾವತಿಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ನಿಗದಿತ ಅವಧಿಯೊಳಗೆ ಬಿಲ್ ಪಾವತಿಗೆ ಕ್ರಮ ವಹಿಸಬೇಕೆಂದು ಸೂಚಿಸಿದರು. ಸಕ್ಕರೆ ಕಾರ್ಖಾನೆಗಳು ಕಬ್ಬು ಸಾಗಾಣಿಕೆ ವಾಹನ ಚಾಲಕರಿಗೆ ಸೂಕ್ತ ತಿಳುವಳಿಕೆ ಮೂಡಿಸಬೇಕು. ಕಬ್ಬು ಸಾಗಾಣಿಕೆ ಮಾಡುವ ಪ್ರತಿಯೊಂದು ಟ್ರ್ಯಾಕ್ಟರ್–ವಾಹನಗಳಿಗೆ ಕಡ್ಡಾಯವಾಗಿ ರಿಫ್ಲೆಕ್ಟರ್‌ಗಳನ್ನು ಅಳವಡಿಸಬೇಕು. ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಅವರು ತಿಳಿಸಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾ–ರಿಹಾಳ, ವಿಜಯಪುರ ಉಪ ವಿಭಾಗಾಧಿಕಾರಿ ಗುರುನಾಥ ದಡ್ಡೆ, ಇಂಡಿ ಉಪವಿಭಾಗಾಧಿಕಾರಿ ಆಬೀದ ಗದ್ಯಾಳ, ಆಹಾರ ಮತ್ತು ನಾಗರಿಕರ ಸಬರಾಜು ಇಲಾಖೆ ಉಪನಿರ್ದೇಶಕ ವಿನಯಕುಮಾರ ಪಾಟೀಲ, ಆಹಾರ ಇಲಾಖೆ ಶಿರಸ್ತೇದಾರ ಅಮರೇಶ ತಾಂಡೂರ ಸೇರಿದಂತೆ ವಿವಿಧ ಅಧಿಕಾರಿಗಳು, ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ವ್ಯವಸ್ಥಾಪಕ ನಿರ್ದೇಶಕರು ಉಪಸ್ಥಿತರಿದ್ದರು.

# ಪಹಣಿಯಲ್ಲಿನ ವಕ್ಫ್ ಆಸ್ತಿ ತೆಗೆದುಹಾಕಲು ಆಗ್ರಹ




**ಮುದ್ದೇಬಿಹಾಳ;** ರೈತರಿಗೆ ಯಾವುದೆ ಮಾಹಿತಿ ನೀಡದೇ ರೈತರ ಪಹನಿಯಲ್ಲಿ ವಕ್ಪ್ ಬೋರ್ಡ್ ಎಂದು ನಮೂದಿಸಲಾಗಿದೆ ಇದರಿಂದ ರೈತರು ಸಂಕಷ್ಟಕ್ಕೆ ಈಡಾಗಿ ಹಾಸಿಗೆ ಹಿಡಿದಿದ್ದಾರೆ ರೈತರ ಪಹಣಿಯಲ್ಲಿಯ ವಕ್ಪ್ ಕರ್ನಾಟಕ ಸರಕಾರ ಹೆಸರನ್ನು ಎರಡು ದಿನದಲ್ಲಿ ತಗೆದು ಹಾಕಬೇಕು ಹಾಕದೆ ಇದ್ದರೆ ತಹಶಿಲ್ದಾರ ಕಚೇರಿಯ ಆವರಣದಲ್ಲಿ ರೈತರು ಆಮರಣ ಉಪವಾಸ ಸತ್ಯಾಗ್ರಹ ಮಾಡಬೇಕಾಗುತ್ತದೆ ಎಂದು ರೈತರಾದ ನಾಗಲಿಂಗಯ್ಯ ಮಠ, ಬಿ.ಎಸ್ ಹುಗಾರ, ಸಿದ್ದು ಹೆಬ್ಬಾಳ, ಸಂಗಣ್ಣ ಬಾಗೇವಾಡಿ, ರಾಜ್ಯ ಸರಕಾರಕ್ಕೆ ಸಿಎಂ ಸಿದ್ದರಾಮಯ್ಯನವರಿಗೆ ಆಗ್ರಹಿಸಿದರು.

ಸೋಮುವಾರ ತಾಲೂಕಿನ ಕುಂಟೋಜಿ ಹಾಗೂ ಬಿದರಕುಂದಿ ಗ್ರಾಮದ ರೈತರು ಕುಂಟೋಜಿ ಗ್ರಾಮದ ಸರ್ವೆ ನಂ 277.278.279.289.290.300.301. 302.303/304.305.311.312.313. ಮತ್ತು 466/1 ಜಮೀನುಗಳ ಉತಾರೆಯಲ್ಲಿ ವಕ್ಪ್ ಆಸ್ತಿ ಕರ್ನಾಟಕ ಸರ್ಕಾರ ಎಂದು ನಮೂದಿಸಿದನ್ನು ತೆಗೆದು ಹಾಕುವಂತೆ ಆಗ್ರಹಿಸಿ ತಹಶಿಲ್ದಾರ ಬಲರಾಮ ಕಟ್ಟಿಮನಿಯವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಕುಂಟೋಜಿ ಸೀಮೆಯಲ್ಲಿ 380 ಕ್ಕೂ ಹೆಚ್ಚು ಎಕರೆ ರೈತರ ಜಮೀನು ವಕ್ಪ ಬೋರ್ಡ್ ಎಂದು ಪಹನಿಯಲ್ಲಿ ನಮೂದಿಸಲಾಗಿದೆ 1930 ರಿಂದ ಇಲ್ಲಿಯವರೆಗೆ ರೈತರ ಜಮೀನಿನ ದಾಖಲೆಯಲ್ಲಿ ವಕ್ಪ ಬೋರ್ಡ್ ಹೆಸರು ಇಲ್ಲ ಇತ್ತಿಚೆಗೆ ಹೇಗೆ ಸೇರ್ಪಡೆಯಾಗಯಿತು

ವಕ್ಪ ಕಾಯಿದೆ ಮೂಲಕ ರಾಜ್ಯ ಸರಕಾರ ಮರಣ ಶಾಸನ ಬರೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ರೈತ ಮುಖಂಡರು ರೈತರ ಪಹನಿಯಲ್ಲಿಯ ವಕ್ಪ್ ಹೆಸರು ತಗೆದು ಹಾಕುವುದು ಮಾತ್ರವಲ್ಲದೆ ,

ಮುಖ್ಯಮಂತ್ರಿ ಸಿದ್ದರಾಮಯ್ಯನವರು ರೈತರ ಹಿತ ಹಾಗೂ ಅವರ ಜಮೀನಿನ ಭದ್ರತೆಯ ಬಗ್ಗೆ ನಿಜವಾಗಿಯೂ ಆಸಕ್ತಿ ಇದ್ದರೆ ಈ ನೋಟಿಫಿಕೇಶನ್‌ಗಳನ್ನು ಹೊರಡಿಸಿರುವ ಗೆಜೆಟ್ ಅಧಿಸೂಚನೆಯನ್ನು ಹಿಂಪಡೆಯಬೇಕು ಇಲ್ಲದೆ ಇದ್ದರೆ ತಹಶಿಲ್ದಾರ ಕಚೇರಿಯ ಆವರಣದಲ್ಲಿ ತಾಲೂಕಿನ ಎಲ್ಲಾ ರೈತರು ಸೇರಿ ಆಮರಣ ಉಪವಾಸ ಸತ್ಯಾಗ್ರಹ ಮಾಡುತ್ತವೆ ಎಂದು ಎಚ್ಚರಿಕೆ ನೀಡಿದರು.

ಕುಂಟೋಜಿ ಗ್ರಾಮದಿಂದ ಆಗಮಿಸಿದ ರೈತರು ಪಟ್ಟಣದ ಅಂಬೇಡ್ಕರ್ ವೃತ್ತ ಬಸವೇಶ್ವರ ವೃತ್ತ ಮಾರ್ಗವಾಗಿ ರಾಜ್ಯ ಸರಕಾರದ ವಿರುದ್ಧ ದಿಕ್ಕಾರ ಹಾಕುತ್ತಾ ರೈತರ ಜಮೀನಿನ ಉತಾರೆಯಲ್ಲಿಯ ಕಾಲಂ ನಂ 11 ರಲ್ಲಿಯ ವಕ್ಪ ಬೋರ್ಡ್ ಹೆಸರನ್ನು ತಗೆದು ಹಾಕಬೇಕು ಮತ್ತು ಗಜೆಟ್ ಅಧಿಸೂಚನೆ ಹಿಂಪಡೆಯಬೇಕು ಎಂದು ಘೋಷಣೆ ಹಾಕಿದರು ಈ ವೇಳೆ ಮುಖಂಡರಾದ ಗುರುಲಿಂಗಪ್ಪ ಸುಳ್ಳೂಳ್ಳಿ, ಗುರುಪಾದ ಹೆಬ್ಬಾಳ, ಸಂತೋಷ ಬಿರಾದಾರ,ಬಸಯ್ಯ ಮಠ, ರಮೇಶ ಉಗರಗೋಳ, ಬಸಲಿಂಗಪ್ಪ ಕುಂಬಾರ, ಸಂಗಪ್ಪ ಕುಂಬಾರ,ಚನ್ನಬಸಪ್ಪ ಹಡಪದ, ನಹಿಂಪಾಷಾ ಇನಾಮದಾರ, ಯೂನಸ್ ಪಾಷಾ ಇನಾಮದಾರ,

ಸಿದ್ದರಾಮ ಕೋಳೂರ,ರೈತ ಮುಖಂಡ ವಾಯ್ ಎಲ್ ಬಿರಾದಾರ, ಕುಂಟೋಜಿ, ಬಿದರಕುಂದಿ, ಗ್ರಾಮದ ರೈತರು ಹೋರಾಟದಲ್ಲಿ ಭಾಗವಹಿಸಿದ್ದರು.

# ನಾಳೆ ರಾಯರು ಬಂದರು ಮಾವನ ಮನೆಗೆ ನಗೆ ಕಾರ್ಯಕ್ರಮ

**ಬೆಳಗಾವಿ:** ನಗರದ ಹಾಸ್ಯಕೂಟ ಮತ್ತು ಕನ್ನಡ ಸಾಹಿತ್ಯ ಭವನ ವಿಶ್ವಸ್ತ ಮಂಡಳಿಯವರು ಇದೇ ದಿ. 9 ಶನಿವಾರದಂದು ಸಾಯಂಕಾಲ 4-30 ಕ್ಕೆ ಚೆನ್ನಮ್ಮ ವೃತ್ತದ ಬಳಿಯಿರುವ ಕನ್ನಡ ಸಾಹಿತ್ಯ ಭವನದಲ್ಲಿ "ರಾಯರು ಬಂದರು ಮಾವನ ಮನೆಗೆ" ಎಂಬ ಹಾಸ್ಯ ಕಾರ್ಯತಕ್ರಮವನ್ನು ಹಮ್ಮಿಕೊಂಡಿದ್ದಾರೆ. ಅಧ್ಯಕ್ಷತೆಯನ್ನು ನಿವೃತ್ತ ಪ್ರಾಚಾರ್ಯ, ಕವಿ ಪ್ರೊ. ಎಂ. ಎಸ್. ಇಂಚಲ ವಹಿಸಿಕೊಂಡಿದ್ದಾರೆ. ಅತಿಥಿಗಳಾಗಿ ಹಿರಿಯ ಪತ್ರಕರ್ತ ಎಲ್. ಎಸ್. ಶಾಸ್ತ್ರಿಯವರು ಆಗಮಿಸಲಿದ್ದಾರೆ. ಪ್ರಾಯೋಜಕತ್ವವನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ನಿವೃತ್ತ ಹಿರಿಯ ಲೆಕ್ಕಪರಿಶೋಧಕರಾದ ಉದಯಕುಮಾರ ವನಕುದ್ರೆಯವರು ವಹಿಸಿಕೊಂಡಿದ್ದಾರೆ. ಅಳಿಯ ಮಾವನ ಮನೆಗೆ ಬಂದಾಗಿನ ಮೋಜಿನ ಪ್ರಸಂಗಗಳನ್ನು ಪತ್ರಕರ್ತ ಮುರುಗೇಶ ಶಿವಪೂಜಿ, ಶ್ರೀಮತಿ ರಾಜೇಶ್ವರಿ ಹಿರೇಮಠ, ಶ್ರೀಮತಿ ಸುಪ್ರಿಯಾ ದೇಶಪಾಂಡೆ, ಶ್ರೀಮತಿ ದೀಪಿಕಾ ಕುಲಕರ್ಣಿ ಮತ್ತು ಜಿ.ಎಸ್. ಸೋನಾರ ಹಂಚಿಕೊಳ್ಳಲಿದ್ದಾರೆ. ಗುಂಡೇನಟ್ಟಿ ಮಧುಕರ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದು ಕೆ. ತಾನಾಜಿ ನಿರೂಪಿಸಲಿದ್ದಾರೆ.ಹೆಚ್ಚಿನ ಸಂಖ್ಯೆಯಲ್ಲಿ ಹಾಸ್ಯಾಸಕ್ತರು ಆಗಮಿಸುವಂತೆ ಸಾಹಿತ್ಯ ಭವನ ಗೌರವ ಕಾರ್ಯದರ್ಶಿ ರಾಮಚಂದ್ರ ಕಟ್ಟಿ ತಿಳಿಸಿದ್ದಾರೆ.

# ಹಿರೇನಂದಿಯಲ್ಲಿ ಸಾಂಸ್ಕೃತಿಕ ಉತ್ಸವ ಹಾಗೂ ರಂಗಗೀತೋತ್ಸವ



**ಗೋಕಾಕ:** ತಾಲ್ಲೂಕಿನ ಹಿರೇನಂದಿ ಗ್ರಾಮದ ಶ್ರೀ ಬಸವೇಶ್ವರ ರಂಗ ಮಂದಿರದಲ್ಲಿ ನಾಟ್ಯ ಸರಸ್ವತಿ ಕಲಾ ಪೋಷಕ ಸಂಘ ಹಲಗಾ ಹಾಗೂ ಕನ್ನಡ ಮತ್ತು ಸಂಸ್ಕøತಿ ಇಲಾಖೆ ಬೆಂಗಳೂರು, ಇವರ ಆಶ್ರಯದಲ್ಲಿ ಸಾಂಸ್ಕøತಿಕ ಉತ್ಸವ ಹಾಗೂ ರಂಗಗೀತೋತ್ಸವ ಕಳೆದ 23ರಂದು ಜರುಗಿತು.

ಕಾರ್ಯಕ್ರಮ ದಿವ್ಯ ಸಾನಿದ್ಯ ಶ್ರೀ ತಿಪಯ್ಯ ಹಿರೇಮಠ ಕಾರ್ಯಕ್ರಮ ದಲ್ಲಿ ಶ್ರೀ ಗಂಗಪ್ಪ ಮಾ. ಹಾರುಗೊಪ್ಪ ಗ್ರಾಮ ಪಂಚಾಯತ ಸದಸ್ಯರು ಮಾತನಾಡಿ ಜನಪದ ಕಲೆ ಜೀವನದ ಅವಿಭಾಜ ಅಂಗವಾಗಿದೆ ಈ ಕಲೆಯನ್ನ ಉಳಿಸಿ ಬೆಳಸಬೇಕು ಎಂದು ನುಡಿದರು. ಶ್ರೀ ಬಸಪ್ಪ ಕಾರಗಿ, ಬೀರಪ್ಪ ಕಟ್ಟಿಮನಿ, ಮಾರುತಿ ಕಟಿಕಾರ. ಬಸವರಾಜ ಅಂಕಲಗಿ, ನಾಗರಾಜ ಹಾಗಳಗಿ, ದುರಗಪ್ಪ ಮರೆಪ್ಪಗೋಳ, ಮಾರುತಿ ಮಾಳಗಿ ಭಾಗವಹಿಸಿದರು.

ನಂತರ ನಡೆದ ಕಾರ್ಯಕ್ರಮದಲ್ಲಿ ಡೊಳ್ಳಿನ ಪದ, ಸೋಬಾನ ಪದ, ಚೌಡಕಿ ಪದ, ಗೀಗಿ ಪದ, ಡೊಳ್ಳಿನ ಕೈ ಪದ, ಹಲಗೆ ವಾದನ, ಮಹಿಳಾ ಡೊಳ್ಳಿನ ಪದ, ಸಣ್ಣಾಟ ಪದ, ಶ್ರೀ ನಿಜಗುಣ ಶಿವಯಾಗಿ ಎಂಬ ಪೌರಾಣಿಕ ನಾಟಕ ಜರುಗಿತ್ತು.ಕಾರ್ಯಕ್ರಮ ನಿರೂಪಣೆ ಡಿ.ಎಲ್.ಮರೆಪ್ಪಗೋಳ ಹಾಗೂ ಸ್ವಾಗತ ಚನ್ನಪ್ಪ ಮರೆಪ್ಪಗೋಳ ಇವರು ಮಾಡಿದರು.

# ಜಿಲ್ಲೆಯ ಸಕ್ಕರೆ ಕಾರ್ಖಾನೆ ಆರಂಭಕ್ಕೆ ಡಿಸಿ ಸೂಚನೆ

## ಹಣ ಪಾವತಿ ವಿಳಂಬ ಮಾಡುವ ಸಕ್ಕರೆ ಕಾರ್ಖಾನೆ ಮೇಲೆ ಕಠಿಣ ಕ್ರಮ

**ವಿಜಯಪುರ:** ಜಿಲ್ಲೆಯಲ್ಲಿರುವ ಎಲ್ಲ ಸಕ್ಕರೆ ಕಾರ್ಖಾನೆಗಳು ಪ್ರಸಕ್ತ ಸಾಲಿನ ಹಂಗಾಮಿಗೆ ಸರ್ಕಾರದ ಆದೇಶದಂತೆ ಕಬ್ಬು ನುರಿಸುವ ಕಾರ್ಯ ಆರಂಭಿಸುವಂತೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಸೂಚನೆ ನೀಡಿದ್ದಾರೆ.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಸರ್ಕಾರದ ಆದ-'ೇಶದಂತೆ ಕಬ್ಬು ನುರಿಸುವ ಕಾರ್ಯ ಆರಂಭಿಸಬೇಕು. ಬಸವೇಶ್ವರ ಸಕ್ಕರೆ ಕಾರ್ಖಾನೆ ಕಬ್ಬು ಒದಗಿಸಿದ ರೈತರಿಗೆ ಬಿಲ್ಲು ಪಾವತಿಯಲ್ಲಿ ವಿಳಂಬ, ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಕಬ್ಬು ನುರಿಸುವುದು ಸೇರಿದಂತೆ ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಬಸವೇಶ್ವರ ಸಕ್ಕರೆ ಕಾರ್ಖಾನೆಗೆ ಕಬ್ಬು ನುರಿಸುವುದು ತಡೆಹಿಡಿಯಲಾಗಿದೆ ಎಂದು ತಿಳಿಸಿದ ಅವರು, ಉಳಿದಂತೆ ಎಲ್ಲ ಕಾರ್ಖಾನೆಗಳು ಕಬ್ಬು ನುರಿಸುವ ಕಾರ್ಯ ಆರಂಭಿಸಿ, ಕಬ್ಬು ಒದಗಿಸಿದ ರೈತರಿಗೆ ಯಾವುದೇ ವಿಳಂಬ ಮಾಡದೇ ನಿಗದಿತ 14 ದಿನಗಳೊಳಗಾಗಿ ಬಿಲ್‌ನ್ನು ಪಾವತಿಸಲು ಕ್ರಮ ವಹಿಸುವಂತೆ ಅವರು ಸೂಚನೆ ನೀಡಿದರು.



ಕಬ್ಬು ನುರಿಸುವ ಮೊದಲು ಎಲ್ಲ ಸಕ್ಕರೆ ಕಾರ್ಖಾನೆಗಳು ತೂಕದ ಯಂತ್ರಗಳು ಡಿಜಿಟಲೀಕರಣಗೊಂಡಿರುವ ಕುರಿತು ಪರಿಶೀಲನೆ ನಡೆಸಿ ವರದಿ ಸಲ್ಲಿಸಬೇಕು. ಖಜಿಟಲೀಕರಣಗೊಳ್ಳದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ನುರಿಸಲು ಅವಕಾಶ ನೀಡುವುದಿಲ್ಲ ಎಂದು ತಿಳಿಸಿದ ಅವರು, ಸ್ಟ್ಯಾಪಿಂಗ್ ಕಾರ್ಯ ಪೂರ್ಣಗೊಂಡಿರಬೇಕು. ಪಕ್ವವಾಗಿರುವ ಕಬ್ಬನ್ನು ಆದ್ಯತೆಯ ಮೇರೆಗೆ ಕಟಾವು ಮಾಡಿ ನುರಿಸಬೇಕು. ಕೆಎಸ್‌ಪಿಸಿಬಿಯಿಂದ ನಿರ್ಧರಿತ ಕಾರ್ಖಾನೆ ನುರಿಸುವ ಸಾಮರ್ಥ್ಯಕ್ಕನುಗುಣವಾಗಿ ಮಾತ್ರ ಕಬ್ಬು ನುರಿಸಬೇಕು. ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಕಬ್ಬು ನುರಿಸದಂತೆ ಅವರು ಎಚ್ಚರಿಕೆ ನೀಡಿದ್ದಾರೆ. ಜಿಲ್ಲೆಯಲ್ಲಿ ಬ್ಯಾಂಕ್ ಖಾತೆ ಹೊಂದಿರಬೇಕು. ಈ ಖಾತೆಯಿಂದಲೇ ಸಕ್ಕರೆ, ಮಾರಾಟ ವ್ಯವಹಾರ ನಿರ್ವಹಣೆಯಾಗಬೇಕು. ಈ ಕುರಿತು ಆಹಾರ ಮತ್ತು ನಾಗರಿಕರ ಸಬರಾಜು ಇಲಾಖೆ ಉಪನಿರ್ದೇಶಕರು ದೃಢೀಕರಣ ಮಾಡುವಂತೆ ತಿಳಿಸಿದರು. ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಗೆ ಉಪವಿಭಾಗಾಧಿಕಾ-ರಿಗಳು, ಆಹಾರ ಮತ್ತು ನಾಗರಿಕರ ಸಬರಾಜು ಇಲಾಖೆ ಉಪನಿರ್ದೇಶಕರು ಕಾಲಕಾಲಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಕಬ್ಬು ನುರಿಸುವ ಕಾರ್ಖಾನೆಗಳು ಎಲ್ಲ ನಿಯಮಗಳನು ಪಾಲಿಸುತ್ತಿರುವ ಕುರಿತು ಪರಿಶೀಲನೆ ನಡೆಸುವಂತೆ ಅವರು ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ ಅವರು ಮಾತನಾಡಿ,ರೈತರಿಗೆ ಬಿಲ್ ಪಾವತಿಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ನಿಗದಿತ ಅವಧಿಯೊಳಗೆ ಬಿಲ್ ಪಾವತಿಗೆ ಕ್ರಮ ವಹಿಸಬೇಕೆಂದು ಸೂಚಿಸಿದರು. ಸಕ್ಕರೆ ಕಾರ್ಖಾನೆಗಳು ಕಬ್ಬು ಸಾಗಾಣಿಕೆ ವಾಹನ ಚಾಲಕರಿಗೆ ಸೂಕ್ತ ತಿಳುವಳಿಕೆ ಮೂಡಿಸಬೇಕು. ಕಬ್ಬು ಸಾಗಾಣಿಕೆ ಮಾಡುವ ಪ್ರತಿಯೊಂದು ಟ್ರ್ಯಾಕ್ಟರ್-ವಾಹನಗಳಿಗೆ ಕಡ್ಡಾಯವಾಗಿ ರಿಫ್ಲೆಕ್ಟರ್‌ಗಳನ್ನು ಅಳವಡಿಸಬೇಕು. ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಅವರು ತಿಳಿಸಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ, ವಿಜಯಪುರ ಉಪ ವಿಭಾಗಾಧಿಕಾರಿ ಗುರುನಾಥ ದಡ್ಡೆ, ಇಂಡಿ ಉಪವಿಭಾಗಾಧಿಕಾರಿ ಆಬೀದ ಗದ್ಯಾಳ, ಆಹಾರ ಮತ್ತು ನಾಗರಿಕರ ಸಬರಾಜು ಇಲಾಖೆ ಉಪನಿರ್ದೇಶಕ ವಿನಯಕುಮಾರ ಪಾಟೀಲ, ಆಹಾರ ಇಲಾಖೆ ಶಿರಸ್ತೇದಾರ ಅಮರೇಶ ತಾಂಡೂರ ಸೇರಿದಂತೆ ವಿವಿಧ ಅಧಿಕಾರಿಗಳು, ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ವ್ಯವಸ್ಥಾಪಕ ನಿರ್ದೇಶಕರು ಉಪಸ್ಥಿತರಿದ್ದರು.

### ಚೂರು-ಪಾರು

## ಗ್ರಾಮ ಪಂಚಾಯತಿಗಳ ಉಪ ಚುನಾವಣೆಗೆ ವೇಳಾಪಟ್ಟಿ ಪ್ರಕಟ

**ವಿಜಯಪುರ:** ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಿಗೆ ವಿವಿಧ ಕಾರಣಗಳಿಂದ ತೆರವಾಗಿರುವ ಸ್ಥಾನಗಳಿಗೆ ಉಪ ಚುನಾವಣೆ ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ವೇಳಾಪಟ್ಟಿಯನ್ನು ನಿಗದಿಪಡಿಸಿದ್ದಾರೆ. ಜಿಲ್ಲೆಯ ನಿಡಗುಂದಿ ತಾಲೂಕಿನ ಆಲಮಟ್ಟಿ ಗ್ರಾಮ ಪಂಚಾಯತಿಯ ಅರಳದಿನ್ನಿ ಹಾಗೂ ಚಿಮ್ಮಲಗಿ ಗ್ರಾಮ ಪಂಚಾಯತಿಯ ಚಿಮ್ಮಲಗಿ ಪು.ಕೆ. ಕ್ಷೇತ್ರಕ್ಕೆ, ಇಂಡಿ ತಾಲೂಕಿನ ಸಾಲೋಟಗಿ ಹಾಗೂ ಖೇಡಗಿ ಗ್ರಾಮ ಪಂಚಾಯತ್, ಬಸವನಬಾಗೇವಾಡಿ ತಾಲೂಕಿನ ವಡವಡಗಿ ಗ್ರಾಮ ಪಂಚಾಯಿತಿಯ ನಾಗರಾಳ ಹುಲಿ, ಮುತ್ತಗಿ ಹಾಗೂ ಬ್ಯಾಕೋಡ ಗ್ರಾಮ ಪಂಚಾಯತಿಯ ಜಯವಾಡಗಿ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಸಲು ವೇಳಾಪಟ್ಟಿ ನಿಗದಿಪಡಿಸಲಾಗಿದೆ.ಬಬಲೇಶ್ವರ ತಾಲೂಕಿನ ಬೋಳಚಿಕ್ಕಲಕಿ ಗ್ರಾಮ ಪಂಚಾಯತಿಯ ಕಾತ್ರಾಳ ಕ್ಷೇತ್ರಕ್ಕೆ, ವಿಜಯಪುರ ತಾಲೂಕಿನ ಕನ್ನೂರ, ನಾಗಠಾಣ, ಜುಮನಾಳ ಹಾಗೂ ಹೊನಗನಹಳ್ಳಿ ಗ್ರಾಮ ಪಂಚಾಯತಿಗೆ, ಮುದ್ದೇಬಿಹಾಳ ತಾಲೂಕಿನ ಕುಂಟೋಜಿ ಗ್ರಾಮ ಪಂಚಾಯತಿಗೆ, ತಾಳಿಕೋಟೆ ತಾಲೂಕಿನ ಹಿರೂರ ಗ್ರಾಮ ಪಂಚಾಯತಿಯ ತಮದಡ್ಡಿ, ಚಡಚಣ ತಾಲೂಕಿನ ಲೋಣಿ ಬಿ.ಕೆ. ಮತ್ತು ಚಡಚಣ ತಾಲೂಕಿನ ಹತ್ತಳ್ಳಿ ಗ್ರಾಮ ಪಂಚಾಯತಿಯ ಒಂದು ಸ್ಥಾನಕ್ಕೆ ಉಪ ಚುನಾವಣೆ ನಡೆಸಲು ವೇಳಾಪಟ್ಟಿ ನಿಗದಿಪಡಿಸಲಾಗಿದೆ. ಉಪಚುನಾವಣೆ ವೇಳಾಪಟ್ಟಿಯಂತೆ ನಾಮಪತ್ರಗಳನ್ನು ಸಲ್ಲಿಸಲು ದಿನಾಂಕ : 12-11-2024 ಕೊನೆಯ ದಿನಾಂಕವಾಗಿದೆ. ದಿನಾಂಕ : 13-11-2024 ನಾಮಪತ್ರಗಳ ಪರಿಶೀಲನೆ, ದಿನಾಂಕ : 15-11-2024 ರಂದು ಉಮೇದುವಾರಿಕೆಯಿಂದ ಹಿಂತೆಗೆದುಕೊಳ್ಳಲು ಕೊನೆಯ ದಿನ, ದಿನಾಂಕ : 23-11-2024ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ಮತದಾನ ಅವಶ್ಯವಿದ್ದರೆ ಮತದಾನ ನಡೆಸಬೇಕಾದ ದಿನ, ದಿನಾಂಕ : 26-11-2024ರಂದು ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಇಂದು ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ

ಬಸವನಬಾಗೇವಾಡಿ: ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಭಾ ಭವನದಲ್ಲಿ ನ.8 ರಂದು ಬೆಳಗ್ಗೆ 10 ಗಂಟೆಗೆ ಮಹಾವಿದ್ಯಾಲಯದ 2024-25 ನೇ ಶೈಕ್ಷಣಿಕ ವರ್ಷದ ಕ್ರೀಡಾ ಮತ್ತು ಸಾಂಸ್ಕøತಿಕ ಚಟುವಟಿಕೆಗಳ ಉದ್ಘಾಟನೆ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ಹಮ್ಮಿಕೊಂಡಿದೆ. ಸಾನಿಧ್ಯವನ್ನು ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ವಹಿಸುವರು. ವಿಜಯಪುರದ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅ[illegible]ಕ್ಷಕ ಟಿ.ಮಲ್ಲೇಶ್ ಸಮಾರಂಭ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ವಿಜಯಪುರದ ಎ.ಎಸ್.ಪಿ. ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಬಿ.ಎಸ್.ಬೆಳಗಲಿ ಆಗಮಿಸುವರು. ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎ.ವ್ಹಿ.ಸೂರ್ಯವಂಶಿ ವಹಿಸುವರು. ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬಸವರಾಜ ನಾಯಕೋಡಿ ಉಪಸ್ಥಿತಿ ಇರುವರು ಎಂದು ಮಹಾವಿದ್ಯಾಲಯದ ಸಾಂಸ್ಕøತಿಕ ಚಟುವಟಿಕೆಗಳ ವಿಭಾಗದ ಕಾರ್ಯಾಧ್ಯಕ್ಷ ಡಾ.ಬಸವರಾಜ ಸಾಲವಾಡಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಯಂತಿಗಳ ಪೂರ್ವಭಾವಿ ಸಭೆ

**ತಾಳಿಕೋಟೆ:** ತಾಲೂಕಾಡಳಿತ ನೇತೃತ್ವದಲ್ಲಿ ನ. 11ರಂದು ಆಚರಿಸಲಾಗುವ ವೀರ ವನಿತೆ ಒನಿಕೆ ಓಬವ್ವ ಹಾಗೂ 18 ಆಚರಿಸಲಾಗುವ ಕನಕ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆಯನ್ನು ನ.7ರಂದು ಸಾಯಂಕಾಲ 4 ಗಂಟೆಗೆ ತಹಶಿಲ್ದಾರ ಕಾರ್ಯಾಲಯದಲ್ಲಿ ಕರೆಯಲಾಗಿದೆಕಾರಣ ಪಟ್ಟಣದ ನಾಗರಿಕರು, ಮುಖಂಡರು, ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರುಗಳು, ಹಾಗೂ ಸಮಾಜ ಬಾಂದವರು ಆಗಮಿಸಿ ಜಯಂತಿ ಆಚರಣೆ ಕುರಿತಂತೆ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ತಹಶಿಲ್ದಾರ ಶ್ರೀಮತಿ ಕೀರ್ತಿ ಚಾಲಕ ಅವರು ತಿಳಿಸಿದ್ದಾರೆ.

# ಜಾನುವಾರು ಗಣತಿ ಕಾರ್ಯ ಯಶಸ್ವಿಗೊಳಿಸಿ

## ಅಧಿಕಾರಿಗಳಿಗೆ ಬೆಮುಲ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಸೂಚನೆ

**ಗೋಕಾಕ:** ಪ್ರತಿ ಮನೆ-ಮನೆಗೆ ಭೇಟಿ ನೀಡಿ ಜಾನುವಾರುಗಳ ನಿಖರವಾದ ಮಾಹಿತಿಯನ್ನು ಸಂಗ್ರಹಿಸಿ ಗಣತಿ ಕಾರ್ಯವನ್ನು ಯಶಸ್ವಿಗೊಳಿಸುವಂತೆ ಶಾಸಕ ಮತ್ತು ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ಬೆಮುಲ) ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ಅಧಿಕಾರಿಗಳಿಗೆ ಸೂಚಿಸಿದರು.



ಇಲ್ಲಿಯ ಎನ್‌ಎಸ್‌ಎಫ್ ಕಾರ್ಯಾಲಯದಲ್ಲಿ ಕಳೆದ ಸೋಮವಾರದಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಿಂದ ನಡೆಯುತ್ತಿರುವ 21 ನೇ ರಾಷ್ಟ್ರೀಯ ಜಾನುವಾರು ಗಣತಿ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇದೊಂದು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ಜಾನುವಾರು ಸಂರಕ್ಷಣಾ ಯೋಜನೆಗಳನ್ನು ರೂಪಿಸಲು ಇದು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ಈ ವರ್ಷದ ಅಂತ್ಯತನಕ ಎಲ್ಲ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಏಕಕಾಲದಲ್ಲಿ ನಡೆಯಲಿದೆ. ಗಣತಿದಾರರು ಪ್ರತಿಯೊಂದು ಮನೆ, ಸಂಸ್ಥೆ, ಉದ್ಯಮಗಳಿಗೆ ಖುದ್ದಾಗಿ ಭೇಟಿ ನೀಡಬೇಕು. ಸಾಕು ಪ್ರಾಣಿಗಳು ಮತ್ತು ಕುಕ್ಕಟಗಳ ಮಾಹಿತಿಗಳನ್ನು ಸಂಗ್ರಹಿಸಬೇಕು. ಬೀದಿ ದನಗಳು, ಬೀದಿ ನಾಯಿಗಳ ಮಾಹಿತಿಯನ್ನು ಸಹ ಸಂಗ್ರಹಿಸಬೇಕು. ಜೊತೆಗೆ ಕುಟುಂಬದ ಯಜಮಾನರ ಸಾಮಾಜಿಕ ಸ್ಥಿತಿ-ಗತಿ, ವಿದ್ಯಾರ್ಹತೆ, ಉದ್ಯೋಗದ ಜತೆಗೆ ಕೃಷಿ ಹಿಡುವಳಿ ಬಗ್ಗೆಯೂ ಮಾಹಿತಿಯನ್ನು ಸಂಗ್ರಹಿಸಿಕೊಳ್ಳುವಂತೆ ಅವರು ಪಶು ಪಾಲನಾ ಇಲಾಖೆಯವರಿಗೆ ಸೂಚಿಸಿದರು.

ಈ ಹಿಂದೆ ಅಂದರೆ 2019 ರಲ್ಲಿ ನಡೆದಿದ್ದ ಜಾನುವಾರ ಗಣತಿಯಲ್ಲಿ ಗೋಕಾಕ ತಾಲ್ಲೂಕಿನಲ್ಲಿ 2,83,861 ಮತ್ತು ಮೂಡಲಗಿ ತಾಲ್ಲೂಕಿನಲ್ಲಿ 1,84,097 ಜಾನುವಾರುಗಳಿದ್ದವು ಎಂಬುದನ್ನು ಸ್ಮರಿಸಿದ ಅವರು, ಇದೇ ಡಿಸೆಂಬರ್ ತಿಂಗಳೊಳಗೆ ನಡೆಯುವ ಜಾನುವಾರ ಗಣತಿ ಕಾರ್ಯ ಮುಗಿದ ಬಳಿಕ ಮತ್ತೊಮ್ಮೆ ನಿಖರವಾದ ಮಾಹಿತಿಯು ಹೊರಬೀಳಲಿದೆಎಂದವರು ತಿಳಿಸಿದ್ದಾರೆ.

ಗಣತಿದಾರರು ತಮ್ಮ ಮನೆಗಳಿಗೆ ಭೇಟಿ ನೀಡಿದಾಗ ಅವರಿಗೆ ಸಂಪೂರ್ಣ ಮಾಹಿತಿಯನ್ನು ನೀಡಬೇಕು. ಈ ರಾಷ್ಟ್ರೀಯ ಕಾರ್ಯಕ್ಕೆ ಸಾರ್ವಜನಿಕರ ಸಹಕಾರವು ಅವಶ್ಯವಾಗಿದೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಹೇಳಿದ್ದಾರೆ.ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಗೋ-ಮಾತೆಗೆ ಪೂಜೆ ಮಾಡುವ ಮೂಲಕ ಜಾನುವಾರು ಗಣತಿ ಕಾರ್ಯಕ್ಕೆ ಚಾಲನೆ ಮಾಡಿದರು.ಗೋಕಾಕ ತಹಶೀಲದಾರ ಡಾ. ಮೋಹನ ಭಸ್ಮೆ, ಮೂಡಲಗಿ ತಹಶೀಲದಾರ ಎಸ್.ಎ. ಬಬಲಿ, ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಎಫ್.ಜಿ.ಚಿನ್ನನ್ನವರ, ಪರಶುರಾಮ ಗಸ್ತೆ, ಸ್ಥಳೀಯ ಮುಖ್ಯ ಪಶು ವೈದ್ಯಾಧಿಕಾರಿ ಡಾ. ಮೋಹನ ಕಮತ, ತಾಲ್ಲೂಕು ಮಟ್ಟದ ಹಿರಿಯ ಅಧಿಕಾರಿಗಳು, ಪಶು ವೈದ್ಯಕೀಯ ಇಲಾಖೆಯ ಸಿಬ್ಬಂದಿಯವರು ಇದ್ದರು.

# ಆರ್.ಎಸ್. ಪಾಟೀಲ ಜನ್ಮದಿನ: ಬ್ರೆಡ್, ಹಣ್ಣು ಹಂಪಲು ವಿತರಣೆ

**ಮುದ್ದೇಬಿಹಾಳ:** ಭಾರತೀಯ ಜನತಾ ಪಾರ್ಟಿಯ ವಿಜಯಪುರ ಜಿಲ್ಲಾ ಅಧ್ಯಕ್ಷರಾದ ಆರ್ ಎಸ್ ಪಾಟೀಲ (ಕೂಚಬಾಳ) ಅವರ 52ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ಮಂಗಳವಾರದಂದು ಮುಂಜಾನೆ ಅಭಿಮಾನಿಗಳಿಂದ ಪಟ್ಟಣದ ಕುಂಬಾರ ಓಣಿಯಲ್ಲಿ ಹತ್ತಿರ ಬರುವ ಶ್ರೀ ಗ್ರಾಮದೇವತೆಗೆ ವಿಶೇಷ ಪೂಜೆ ಸಲ್ಲಿಸಿ ದೇವರಲ್ಲಿ ಪ್ರಾರ್ಥನೆ ಮಾಡಿ ಅವರು ಆರೋಗ್ಯದಲ್ಲಿ ದೇವತೆ ಆರ್ಶಿವಾದಿಸಲಿಂದ ಪ್ರಾರ್ಥಿಸಿದರು.

ನಂತರ ಪಟ್ಟಣದ ಸಾರ್ವಜನಿಕ ಸರಕಾರಿ ಆಸ್ಪತ್ರೆಗೆ ಆರ್ ಎಸ್ ಪಾಟೀಲ ಕುಚಬಾಳ ಅಭಿಮಾನಿಗಳು ತೆರಳಿ ಅಲ್ಲಿರುವ ರೋಗಿಗಳಿಗೆ ಹಣ್ಣು,ಬ್ರೇಡ್ ವಿತರಣೆ ಮಾಡಿದರು. ಇದೇ ವೇಳೆ ಪ್ರಕಾಶಗೌಡ ಪಾಟೀಲ ಮಾತನಾಡಿ ಇಂದು ಆರ್ ಎಸ್ ಪಾಟೀಲ ಕೂಚಬಾಳ ಅವರ 52ನೇ ಜನ್ಮದಿನದ ಅಂಗವಾಗಿ ನಾವೆಲ್ಲ ಅಭಿಮಾನಿಗಳು ಅವರ ಹುಟ್ಟು ಹಬ್ಬವನ್ನು ಆಚರಿಸುತ್ತಿದ್ದೆವೆ.ಅವರಿಗೆ ಮುಂದಿನ ದಿನಮಾನಗಳಲ್ಲಿ ಅವರು ಬಿಜೆಪಿ ಪಕ್ಷದಿಂದ ಶಾಸಕರಾಗಲಿ ಎಂದು ದೇವರಲ್ಲಿ ನಾವೆಲ್ಲರೂ ಶ್ರೀ ಗ್ರಾಮದೇವತೆ ಪೂಜೆ ಸಲ್ಲಿಸಿ ಪ್ರಾರ್ಥನೆ ಮಾಡಿದ್ದೇವೆ ಎಂದರು.

ಈ ಸಂದರ್ಭದಲ್ಲಿ ವೈಧ್ಯಾಧಿಕಾರಿ ಡಾ,ಶೇಗುಣಸಿ, ಮಹಾಂತೇಶ ಹಡಪದ, ಬಸವರಾಜ ದಡ್ಡಿ, ಬಸಯ್ಯ ಹೀರೆಮಠ, ಶೇಕು ಹಡಪದ, ಬೀರಪ್ಪ ಮೇಟಿ, ರಾಹುಲ್ ಮಡಿವಾಳರ, ಶಿವು ಚಿನಿವಾರ,ಮುತ್ತು ಟಕ್ಕಳಕಿ, ಆರೋಗ್ಯ ಇಲಾಖೆ ವೈದ್ಯರು, ಸಿಬ್ಬಂದಿಗಳು,ಸೇರಿದಂತೆ ಉಪಸ್ಥಿತರಿದ್ದರು..



# ಒನಕೆ ಓಬವ್ವ, ಕನಕ ಜಯಂತಿ ಅರ್ಥಪೂರ್ಣ ಆಚರಣೆ

**ವಿಜಯಪುರ:** ನವೆಂಬರ್ 11ರಂದು ವೀರ ವನಿತೆ ಒನಕೆ ಓಬವ್ವ ಹಾಗೂ ನವೆಂಬರ್ 18ರಂದು ಕನಕದಾಸ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧ-ರಿಸಲಾಯಿತು.

ಮಂಗಳವಾರ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರ ಅಧ್ಯಕ್ಷತೆಯಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ ವೀರ ವನಿತೆ ಒನಕೆ ಓಬವ್ವ ಹಾಗೂ ಕನಕದಾಸ ಜಯಂತಿಯ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ನಿರ್ಣಯಿಸಲಾಯಿತು.



ಪೂರ್ವಭಾವಿ ಸಭೆಯಲ್ಲಿ, ನವೆಂಬರ್ 11ರಂದು ವೀರವನಿತೆ ಒನಕೆ ಓಬವ್ವ ಜಯಂತಿ ಅಂಗವಾಗಿ ಬೆಳಗ್ಗೆ 9.30ಕ್ಕೆ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ವಿವಿಧ ಕಲಾತಂಡಗಳೊಂದಿಗೆ ಓನಿಕೆ ಓಬವ್ವ ಅವರ ಭಾವಚಿತ್ರದ ಮೆರವಣಿಗೆ ಚಾಲನೆ ನೀಡಲಾಗುವುದು. ಮೆರವಣಿಗೆಯೂ ನಗರದ ಗಾಂಧಿ ವೃತ್ತ, ಬಸವೇಶ್ವರ ವೃತ್ತ, ಡಾ.ಬಿ.ಆರ್. ಅಂಬೇಡ್ಕರ ವೃತ್ತ, ಕನಕದಾಸ ವೃತ್ತದ ಮಾರ್ಗವಾಗಿ ನಗರದ ಕಂದಗಲ್ ಹನುಮಂತರಾಯ ರಂಗಮಂದಿರವರೆಗೆ ನಡೆಯಲಿದೆ. ಬೆಳಗ್ಗೆ 10.30ಕ್ಕೆ ರಂಗಮಂದಿರದಲ್ಲಿ ಜಯಂತಿ ವೇದಿಕೆ ಕಾರ್ಯಕ್ರಮ ಜರುಗಲಿದೆ.

ನವೆಂಬರ್ 18 ಕನಕದಾಸ ಜಯಂತಿ ಅಂಗವಾಗಿ ಬೆಳಗ್ಗೆ 9.30ಕ್ಕೆ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ವಿವಿಧ ಕಲಾತಂಡಗಳೊಂದಿಗೆ ಕನಕದಾಸ ಅವರ ಭಾವಚಿತ್ರದ ಮೆರವಣಿಗೆ ಚಾಲನೆ ನೀಡಲಾಗುವುದು. ಮೆರವಣಿಗೆಯೂ ನಗರದ ಗಾಂಧಿ ವೃತ್ತ, ಬಸವೇಶ್ವರ ವೃತ್ತ, ಡಾ.ಬಿ.ಆರ್. ಅಂಬೇಡ್ಕರ ವೃತ್ತ, ಕನಕದಾಸ ವೃತ್ತದ ಮಾರ್ಗವಾಗಿ ನಗರದ ಕಂದಗಲ್ ಹನುಮಂತರಾಯ ರಂಗಮಂದಿರವರೆಗೆ ನಡೆಯಲಿದೆ. ಬೆಳಗ್ಗೆ 10.30ಕ್ಕೆ ರಂಗಮಂದಿರದಲ್ಲಿ ಜಯಂತಿ ವೇದಿಕೆ ಕಾರ್ಯಕ್ರಮ ಜರುಗಲಿದೆ.

ವೇದಿಕೆ ಕಾರ್ಯಕ್ರಮದಲ್ಲಿ ನಾಡಗೀತೆ, ಉಪನ್ಯಾಸ, ಸುಗಮಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಣಯಿಸಲಾಯಿತು. ಅಂದು ನಗರದ ವಿವಿಧ ವೃತ್ತಗಳಿಗೆ ಸ್ವಚ್ಚತೆ ಹಾಗೂ ದೀಪಾಲಂಕಾರಗೊಳಿಸುವಂತೆ ಮಹಾನಗರಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು. ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸುವುದು, ವೇದಿಕೆ, ಕುಡಿಯುವ ನೀರು ವ್ಯವಸ್ಥೆ ಕಲ್ಪಿಸಲು ಸಂಬಧಿಸಿದ ಅಧಿಕಾರಿಗಳಿಗೆ ಸೂಚಿಸಲಾಯಿತು.

ಪೂರ್ವಭಾವಿ ಸಭೆಯಲ್ಲಿ ಸಮಾಜ ಕಲ್ಯಾಣ ಉಪನಿರ್ದೇಶಕರಾದ ಪುಂಡಲಿಕ ಮಾನವರ್, ಮಹಾನಗರ ಪಾಲಿಕೆ ಅಧಿಕಾರಿಗಳಾದ ವೈ.ಎಚ್. ನಾರಾಯಣಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ ಭೋವಿ, ವಿವಿಧ ಸಮಾಜದ ಮುಖಂಡರುಗಳಾದ ಮಲ್ಲಣ್ಣ ಶಿರಶ್ಯಾಣ, ಚಿನ್ನು ಚಿನಗುಂಡಿ, ಭೀರಪ್ಪ ಜುಮನಾಳ, ಕೆ.ಕೆ. ಬನ್ನೆಟ್ಟಿ, ರಾಜು ಕಗ್ಗೋಡ, ಮಲ್ಲು ಬಿದರಿ, ಬಸವರಾಜ ವಾಡೇದ, ರಮೇಶ ಕಾಳೇಭಾಗ್, ನೀಲಕಂಠ ಠಾಣೆ, ಶ್ರೀಕಾಂತ ವಾಲೀಕಾರ, ತಿಪ್ಪರಾಯ ಲೊಗಾಂವಿ, ಕಾಂತು ಕಾಂಬಳೆ, ವಿದ್ಯಾವತಿ ಅಂಕಲಗಿ, ಸೋಮನಗೌಡ ಕಲ್ಲೂರ, ದೇವೆಂದ್ರ ಮೇರೆಕರ್, ಗಿರೀಶ್ ಕುಲಕರ್ಣಿ ಸೇರಿದಂತೆ ವಿವಿದ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಕನ್ನಡ ಸಂಸ್ಕೃತಿ, ಸಂಸ್ಕಾರ ಉಳಿಸಿ-ಬೆಳೆಸಿ



**ಗೋಕಾಕ:** ಕನ್ನಡ ಸಂಸ್ಕೃತಿ, ಸಂಸ್ಕಾರವನ್ನು ಎಲ್ಲರೂ ಪಾಲನೆ ಮಾಡಿ ತಮ್ಮ ಮಕ್ಕಳಲ್ಲಿಯೂ ಕನ್ನಡಾಭಿಮಾನವನ್ನು ಮೂಡಿಸುವಂತೆ ತಹಶೀಲ್ದಾರ್ ಡಾ.ಮೋಹನ್ ಭಸ್ಮೆ ಹೇಳಿದರು.

ಮಂಗಳವಾರ ನಗರದ ಬಸವ ಮಂಟಪದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ಮತ್ತು ಭಾವಯಾನ ಮಹಿಳಾ ಸಾಹಿತ್ಯ ಮತ್ತು ಸಾಂಸ್ಕøತಿಕ ವೇದಿಕೆ ಗೋಕಾಕ ಇವುಗಳ ಸಂಯುಕ್ತದಲ್ಲಿ ಹಮ್ಮಿಕೊಂಡ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಭಾಷೆಯನ್ನು ದಿನನಿತ್ಯ ಪೂಜಿಸಿ ಸದಾ ಸ್ಮ-ರಿಸಬೇಕು.ಕನ್ನಡ ಕಲೆ, ಸಾಹಿತ್ಯ, ಸಂಸ್ಕøತಿಗಳನ್ನು ಪ್ರೋತ್ಸಾಹಿಸಿ ಬೆಳೆಸಬೇಕು. ಸಾಹಿತಿ ಕಲಾವಿದರನ್ನು ಗೌರವಿಸಬೇಕು. ಮಾತೃಭಾಷೆ ಕನ್ನಡಕ್ಕೆ ಮೊದಲ ಆದ್ಯತೆ ನೀಡಿ ಕನ್ನಡ ಪರಂಪರೆಯನ್ನು ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ನೀಡುವಂತೆ ಕರೆ ನೀಡಿದರು.ಡಾ.ರಾಜಶೇಖರ್ ಬಿರಾದಾರ ಕನ್ನಡ ಉಳಿವಿಗಾಗಿ ಹೋರಾಟ ಅಂದು-ಇಂದು ಹಾಗೂ ಭಾಗ್ಯಾ ಗುರವ್ ಕಿತ್ತೂರ ವಿಜಯೋತ್ಸವ ಕುರಿತು ಉಪನ್ಯಾಸ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿ.ಆರ್.ಬೆಳಗಲಿ ದತ್ತಿ ಪ್ರಶಸ್ತಿ ಪುರಸ್ಕøತ ಸುರೇಶ್ ಮುದ್ದಾರ, ಛಾಯಾಶ್ರೀ ಪ್ರಶಸ್ತಿ ಪುರಸ್ಕøತ ಛಾಯಾಗ್ರಾಹಕ ಬಿ.ಪ್ರಭಾಕರ ಇವರನ್ನು ಸತ್ಕರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಸಾಪ ಗೋಕಾಕ ಘಟಕದ ಅಧ್ಯಕ್ಷೆ ಭಾರತಿ ಮದಬಾವಿ ವಹಿಸಿದ್ದರು. ವೇದಿಕೆಯಲ್ಲಿ ಕ.ಸಾ.ಪ ಮಾಜಿ ಜಿಲ್ಲಾಧ್ಯಕ್ಷ ಮೋಹನ ಪಾಟೀಲ, ತಾಲೂಕು ಮಾಜಿ ಅಧ್ಯಕ್ಷ ಮಹಾಂತೇಶ ತಾವಂಶಿ, ಸಾಹಿತಿ ಪ್ರೋ. ಚಂದ್ರಶೇಖರ್ ಅಕ್ಕಿ, ಭಾವಯಾನ ವೇದಿಕೆಯ ವಸುಂಧರಾ ಕಾಳೆ, ಬಸವ ಮಂಟಪದ ರಾಜೇಶ್ ಉಳ್ಳಾಗಡ್ಡಿ ಇದ್ದರು.

## ತೆರೆಮೇಲೆ ತಾರಕಾಸುರನ ಆರ್ಭಟ



**ಗಣೇಶ್ ರಾವ್ ಕೇಸರ್‌ಕರ್ 333ನೇ ಚಿತ್ರ**

ಶಿವಪುರಾಣದ 'ತಾರಾಕಾಸುರ' ಪೌರಾಣಿಕ ಭಕ್ತಿಪ್ರಧಾನ ಕಥೆಯನ್ನು ಅದ್ಧೂರಿಯಾಗಿ ಸಿನೆಮಾ ಮಾಡಿದ್ದಾರೆ ನಿರ್ದೇಶಕ ಓಂಕಾರ್ ಪುರುಷೋತ್ತಮ್. ಚಂದನವನದ ನಟ ಗಣೇಶ್‌ರಾವ್ 333ನೇ ಸಿನೆಮಾ ಇದಾಗಿದ್ದು, ಋತುಸ್ಪರ್ಶ ಕಾರ್ತಿಕೇಯನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಭಕ್ತಿ ಪ್ರಧಾನ 'ತಾರಕೇಶ್ವರ' ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ನಡೆಯಿತು.

ವೇದಾಂತ ಆಚಾರ್ಯ ಶ್ರೀ ಮಂಜುನಾಥ ಭಾರತಿ ಸ್ವಾಮಿಗಳು ಮೊದಲ ಟ್ರೈಲರ್, ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಎರಡನೇ ಟ್ರೈಲರನ್ನು ಬಿಡುಗಡೆ ಮಾಡಿ ತಂಡಕ್ಕೆ ಶುಭಹಾರೈಸಿದರು. ಇದೇ ಸಂದರ್ಭದಲ್ಲಿ ನಿರ್ದೇಶಕರ ಸಂಘದ ಅಧ್ಯಕ್ಷ ಎನ್ನಾರ್.ಕೆ.ವಿಶ್ವನಾಥ್, ಅಂಬೇಡ್ಕರ್ ಸೇನೆಯ ಅಧ್ಯಕ್ಷ ಮೂರ್ತಿ,ನಟ,ನಿರ್ಮಾಪಕ ಗಂಡಸಿ ಸದಾನಂದ ಸ್ವಾಮಿ, ಕನ್ನಡ ಸಂಘದ ಅಧ್ಯಕ್ಷ ಬಸವರಾಜ ಪಡುಕೋಟೆ ಮುಂತಾದ ಗಣ್ಯರು ಉಪಸ್ಥಿತರಿದ್ದರು.

ನಮ್ಮ ಚಿತ್ರಕ್ಕೆ ಸೆನ್ಸಾರ್‌ನವರು 'ಯು' ಪ್ರಮಾಣ ಪತ್ರ ನೀಡಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ ಎಂದು ಮಾತು ಆರಂಭಿಸಿದ ಗಣೇಶ್ ರಾವ್, ಉತ್ತಮ ಚಿತ್ರವನ್ನು ಕನ್ನಡಿಗರಿಗೆ ಕೊಡಬೇಕೆಂಂದು ನಿರ್ಮಾಣ ಮಾಡಿದ್ದೇನೆ. ನಿರ್ಮಾಪಕರ ಕಷ್ಟ ಏನೆಂದು ಈಗ ಅರ್ಥವಾಗಿದೆ. ಹೊಸ ಆಲೋಚನೆ ಎನ್ನುವಂತೆ ಈಗಾಗಲೇ ಟಿಕೆಟ್‌ನ್ನು ಮುದ್ರಣ ಮಾಡಿಸಲಾಗಿ, ದರ ನೂರು ರೂಪಾಯಿ ಇರುತ್ತದೆ. ಇದನ್ನು ಖರೀದಿಸಿದವರಿಗೆ ಕರ್ನಾಟಕದ ಯಾವುದೇ ಜಿಲ್ಲೆ, ತಾಲ್ಲೂಕು ಕೇಂದ್ರದಲ್ಲಿ ಸಿನಿಮಾ ವೀಕ್ಷಿಸಬಹುದು. ನಿಮ್ಮೆಲ್ಲರ ಪ್ರೋತ್ಸಾಹದಿಂದ ಇಲ್ಲಿಯವರೆಗೂ 333 ಚಿತ್ರಗಳಲ್ಲಿ ನಟಿಸಿದ್ದೇನೆ ಎಂದರು.

ಕಥೆ,ಚಿತ್ರಕಥೆ,ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿರುವ ಪುರುಷೋತ್ತಮ್ ಓಂಕಾರ್ ಹೇಳುವಂತೆ ಶಿವಪುರಾಣದ ಕಥೆಯಲ್ಲಿ ತಾರಕಾಸುರ ಅಸುರ ಆದರೂ ಕೂಡ, ತಂದೆ ಕೊಂದವನ ಮೇಲೆ ಸೇಡು ತೀರಿಸಿಕೊಳ್ಳಲು ತಪ್ಪಸ್ಸು ಮಾಡಿ ತನಗೆ ಸಾವು ಬರಬಾರದೆಂದು ಬ್ರಹ್ಮನಿಂದ ವರ ಪಡೆದುಕೊಳ್ಳುತ್ತಾನೆ. ಮುಂದೆ ಯಾವ ರೀತಿ ಹೋರಾಟ ಮಾಡುತ್ತಾನೆಂದು ತೋ-ರಿಸಲಾಗಿದೆ ಎಂದರು.

ರಾಜನ ಮಗಳು, ಶಿವ ಭಕ್ತೆ, ಪಾರ್ವತಿಯಾಗಿ ರೂಪಾಲಿ ನಾಯಕಿ. ತಾರಾಕೇಶ್ವರನನ್ನು ಸಂಹಾರ ಮಾಡುವ ಬಾಲ ಸುಬ್ರಹ್ಮಣ್ಯನಾಗಿ ಬಾಲನಟಿ ಋತುಸ್ಪರ್ಶ ಕಾಣಿಸಿಕೊಂಡಿರುವುದು ವಿಶೇಷ. ನಾಗಕನ್ಯೆಯಾಗಿ ಸುಮಿತ ಪ್ರವೀಣ್ ಸೇರಿ ಅದ್ದೂರಿ ತಾರಾಬಳಗವಿದೆ.

ತುಳಜಾಬಾಯಿ, ರೂಪ.ಎಸ್.ದೊಡ್ಮನಿ, ಡಾ.ಸುಮಿತ ಪ್ರವೀಣ್, ಬಸವರಾಜ್ ದೇಸಾಯಿ ಸಹ ನಿರ್ಮಾಪಕರುಗಳಾಗಿ ಗುರುತಿಸಿಕೊಂಡಿದ್ದಾರೆ. ಸಂಗೀತ ರಾಜ್‌ಭಾಸ್ಕರ್, ಛಾಯಾಗ್ರಹಣ ಮುತ್ತುರಾಜ್, ಸಂಕಲನ ಅನಿಲ್‌ಕುಮಾರ್, ನೃತ್ಯ ಕಪಿಲ್, ನಿರ್ಮಾಣ ನಿರ್ವಹಣೆ ದೀಪಕ್‌ಬಾಬು ನಿರ್ವಹಿಸಿದ್ದಾರೆ.

ನಿರ್ಮಾಪಕರ ಕೋರಿಕೆಗೆ ಮನ್ನಣೆ ನೀಡಿದ ಆಹ್ವಾನಿತರು ಒಂದಷ್ಟು ಸಗಟು ಟಿಕೆಟ್‌ಗಳನ್ನು ಸ್ಥಳದಲ್ಲೇ ಖರೀದಿಸಿದರು. ಅಂ-ದಾಜು ಟಿಕೆಟ್ ಮೌಲ್ಯ ಐವತ್ತು ಸಾವಿರ ಆಗಿತ್ತು. ಹಾಗೂ ಭಾರತೀಯ ಅಂಚೆ ಇಲಾಖೆಯವರು ಹೊರತಂದಿರುವ 'ತಾರಕೇಶ್ವರ' ಚಿತ್ರ ಇರುವ ಅಂಚೆಚೀಟಿಯನ್ನು ಗಣ್ಯರುಗಳು ಅನಾವರಣಗೊಳಿಸಿದರು.

## ಎಂಎಂಬಿ ಲೆಗೆಸಿಗೆ ದ್ವಿತೀಯ ವರ್ಷದ ಸಂಭ್ರಮ




ಚಲನಚಿತ್ರ ಪ್ರಚಾರಕ್ಕೆ ವೇದಿಕೆ ಎಂಎಂಬಿ ಲೆಗಸಿ.ನಿರ್ಮಾಪಕ, ನಿರ್ದೇಶಕ, ನಟ ನವರಸನ್ ಕಟ್ಟಿಬೆಳೆಸಿದ ಸಂಸ್ಥೆ ಎರಡು ವರ್ಷ ಪೂರೈಸಿದೆ.

ಎರಡು ವರ್ಷಗಳ ಹಿಂದೆ ಚಲನಚಿತ್ರಗಳ ಪ್ರಚಾರಕ್ಕೆಂದೆ ಸುಸಜ್ಜಿತ ಸಭಾಂಗಣ ನಿರ್ಮಿಸಲಾಗಿದ್ದು,ಕಳೆದೆರಡು ವರ್ಷಗಳಲ್ಲಿ ಸುಮಾರು 300 ಚಲನಚಿತ್ರ ಸಮಾರಂಭಗಳು ಈ ಸ್ಥಳದಲ್ಲಿ ನಡೆದಿವೆ.

ಇತ್ತೀಚಿಗೆ 'ಎಂಎಂಬಿ ಲೆಗಸಿ'ಯ ದ್ವಿತೀಯ ವಾರ್ಷಿಕೋತ್ಸವ ಅದ್ದೂರಿಯಾಗಿ ನೆರವೇರಿತು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ಎನ್ ಎಂ ಸುರೇಶ್, ನಟರಾದ ಚಂದನ್ ಶೆಟ್ಟಿ, ಶ್ರೇಯಸ್ ಮಂಜು, ನಿರ್ಮಾಪಕರಾದ ಕೃಷ್ಣ ಸಾರ್ಥಕ್, ಗೋವಿಂದರಾಜು, ಚೇತನ್ ಗೌಡ, ರಾಜೇಶ್, ಜಿ.ಟಿ.ಮಾಲ್ ನ ಮಾಲೀಕರಾದ ಆನಂದ್, 'ಜಾಲಿವುಡ್' ಸ್ಟುಡಿಯೋಸ್‌ನ ಬಶೀರ್ ಹಾಗೂ ಪ್ರಚಾರಕರ್ತರಾದ ಸುಧೀಂದ್ರ ವೆಂಕಟೇಶ್, ನಾಗೇಂದ್ರ, ವಿಜಯ್ ಕುಮಾರ್, ಕಲ್ಲೇಶ್ ಮುಂತಾದವರು ಸಮಾರಂಭದಲ್ಲಿ ಭಾಗವಹಸಿ ನವರಸನ್ ಅವರಿಗೆ ಶುಭ ಕೋ-ರಿದರು.

ಈ ಸಂದರ್ಭದಲ್ಲಿ ಮಾತನಾಡಿದ ನವರಸನ್, ಕಳೆದ ಕೆಲವು ವರ್ಷಗಳ ಹಿಂದೆ ಚಿತ್ರರಂಗದ ಸ್ನೇಹಿತರೊಂದಿಗೆ ಮಾತನಾಡುತ್ತಿದ್ದಾಗ, ಚಲನಚಿತ್ರಗಳ ಕುರಿತಾದ ಸಮಾರಂಭಗಳನ್ನು ನಡೆಸಲು ಸೀಮಿತ ಬಜೆಟ್ ನಲ್ಲಿ ಸುಸಜ್ಜಿತ ಸಭಾಂಗಣದ ಅವಶ್ಯಕತೆ ಇದೆ. ಅದು ನಿರ್ಮಾಪಕರಿಗೆ ಅನುಕೂಲವಾಗುವಂತಹದು ಆಗಿರಬೇಕು ಎಂದಾಗ ಆ ಕೂಡಲೆ ನಾನು ಈ ವಿಷಯದ ಕುರಿತು ಯೋಚಿಸತೊಡಗಿದೆ.

ಜಿ.ಟಿ.ಮಾಲ್ ನ ನಾಲ್ಕನೇ ಅಂತಸ್ತಿನಲ್ಲಿ ವಿಶಾಲವಾದ ಸ್ಥಳವಿತ್ತು. ಇದರ ಮಾಲೀಕರಾದ ಆನಂದ್ ಅವರ ಬಳಿ ಈ ವಿಷಯದ ಬಗ್ಗೆ ಮಾತನಾಡಿದೆ.

ಅವರು ಜಾಗ ನೀಡಿದರು. ಕೆಲವೇ ತಿಂಗಳಲ್ಲಿ ಚಲನಚಿತ್ರಗಳ ಟೀಸರ್, ಟ್ರೇಲರ್, ಹಾಡು ಬಿಡುಗಡೆ ಹಾಗೂ ಪತ್ರಿಕಾಗೋಷ್ಠಿಗಳನ್ನು ನಡೆಸುವಂತಹ ಸುಸಜ್ಜಿತ ಎಂಎಂಬಿ ಲೆಗಸಿ ಸಭಾಂಗಣ ಸಿದ್ದವಾಯಿತು ಎಂದು ಆರಂಭದ ದಿನಗಳನ್ನು ನೆನೆದರು.

ನಿರ್ಮಾಪಕರಿಗೆ ಆರ್ಥಿಕವಾಗಿ ಹೆಚ್ಚು ಹೊರೆ ಆಗದಂತಹ ದರವನ್ನು ನಿಗದಿಪಡಿಸಲಾಯಿತು.

ಎರಡು ವರ್ಷಗಳಲ್ಲಿ ಹತ್ತಿರಹತ್ತಿರ 300 ಸಮಾರಂಭಗಳು ಇಲ್ಲಿ ನಡೆದಿದೆ. ಹಾಗಂತ ಇದರಿಂದ ನನಗೆ ಆರ್ಥಿಕವಾಗಿ ತುಂಬಾ ಲಾಭಗಳಿಸಿಲ್ಲ. ಕೆಲವೊಮ್ಮೆ ನಾನೇ ಕೈಯಿಂದ ಬಾಡಿಗೆ ಕಟ್ಟಿದ್ದು ಇದೆ. ಇನ್ನೂ ಹೆಚ್ಚಿನ ನಿರ್ಮಾಪಕರು ಈ ಸಭಾಂಗಣದ ಅನುಕೂಲತೆಯನ್ನು ಬಳಸಿಕೊಳ್ಳಬೇಕೆಂದು ವಿನಂತಿಸುತ್ತೇನೆ.

ಚಿತ್ರಂಗದದವರೆಲ್ಲರೂ ಇದರ ಸದುಪಯೋಗಪಡೆದುಕೊಳ್ಳಿ ಎಂದರು.

# ರಕ್ತಹೀನತೆ ಮಧುಮೇಹಿಗಳಿಗೆ ಮಾತ್ರವಲ್ಲ ಈ ಎಲ್ಲಾ ಸಮಸ್ಯೆ ಇರುವವರಿಗೂ ರಾಗಿ ಬೆಸ್ಟ್ ಅಂತೆ!



ರಾಗಿ ಹಿಟ್ಟಿನಿಂದ ನಾನಾ ರೀತಿಯ ಉಪಹಾರವನ್ನು ತಯಾರಿಸಲಾಗುತ್ತದೆ. ರಾಗಿಯು ಪೋಷಕಾಂಶಗಳಿಂದ ಸಮೃದ್ಧವಾಗಿದ್ದು, ಕ್ಯಾಲ್ಸಿಯಂ ಕೊರತೆಯನ್ನು ನಿವಾರಿಸಲೂ ಸಹಕಾ-ರಿಯಾಗಿದೆ.

ಇಂದಿನ ಕಾಲದಲ್ಲಿ ಜನರು ಫಿಟ್ ಆಗಿರಲು, ತೂಕ ಇಳಿಸಿಕೊಳ್ಳಲು ವಿವಿಧ ಕ್ರಮಗಳನ್ನು ಅನುಸರಿಸುತ್ತಾರೆ, ಕೆಲವರು ತಮ್ಮ ಆಹಾರ ಡಯೆಟ್‌ನ್ನು ಬದಲಾಯಿಸುತ್ತಾರೆ ಇನ್ನೂ ಕೆಲವರು ಜಿಮ್‌ನಲ್ಲಿ ಗಂಟೆಗಟ್ಟಲೆ ಬೆವರು ಸು-ರಿಸುತ್ತಿದ್ದಾರೆ. ಫಿಟ್ ಆಗಿರಲು ಡಯೆಟ್ ಜೊತೆ ದೈಹಿಕ ಚಟುವಟಿಕೆಯೂ ಮುಖ್ಯ. ಅಂತಹ ಪರಿಸ್ಥಿತಿಯಲ್ಲಿ, ಕೆಲವರು ತಮ್ಮ ಆಹಾರದಲ್ಲಿ ಕೆಲವು ವಸ್ತುಗಳನ್ನು ಸೇರಿಸುತ್ತಾರೆ, ಅವುಗಳಲ್ಲಿ ಒಂದು ರಾಗಿ. ರಾಗಿಯನ್ನು ಪೋಷಕಾಂಶಗಳ ಶಕ್ತಿಕೇಂದ್ರ ಎಂದು ಕರೆಯಲಾಗುತ್ತದೆ.

**ರಾಗಿಯಲ್ಲಿರುವ ಪೋಷಕಾಂಶಗಳು**

ಇದು ಉತ್ತಮ ಆರೋಗ್ಯಕ್ಕೆ ಅಗತ್ಯವಾದ ಕ್ಯಾಲ್ಸಿಯಂ, ವಿಟಮಿನ್, ಫೈಬರ್ ಮತ್ತು ಕಾರ್ಬೋಹೈಡ್ರೇಟ್‌ಗಳನ್ನು ಒಳಗೊಂಡಿದೆ. ಈ ಫೈಬರ್ ಭರಿತ ಧಾನ್ಯವು ತೂಕವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಹಾಗೆಯೇ ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ. ನೀವು ಇದನ್ನು ಯಾವುದೇ ಸಮಯದಲ್ಲಿ ತೆಗೆದುಕೊಳ್ಳಬಹುದು, ಆದರೆ ನೀವು ಇದನ್ನು ಬೆಳಗಿನ ಉಪಾಹಾರದಲ್ಲಿ ಸೇವಿಸಿದರೆ, ಇದು ದಿನವಿಡೀ ನಿಮಗೆ ಚೈತನ್ಯವನ್ನು ನೀಡುವುದು ಮಾತ್ರವಲ್ಲದೆ ಅನೇಕ ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ.

**ಕ್ಯಾಲ್ಸಿಯಂ ಕೊರತೆಯನ್ನು ನಿವಾ-ರಿಸುತ್ತದೆ**

ಇತರ ಧಾನ್ಯಗಳ ಹಿಟ್ಟಿಗೆ ಹೋಲಿಸಿದರೆ, ರಾಗಿ ಹಿಟ್ಟಿನಲ್ಲಿ ಹೆಚ್ಚಿನ ಪ್ರಮಾಣದ ಕ್ಯಾಲ್ಸಿಯಂ ಇದೆ, ಇದು ಮೂಳೆಗಳು ಮತ್ತು ಹಲ್ಲುಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ. ಇದರೊಂದಿಗೆ, ಆಸ್ಟಿಯೊಪೊರೋಸಿಸ್ ತಡೆಗಟ್ಟುವಲ್ಲಿ ಇದು ತುಂಬಾ ಉಪಯುಕ್ತವೆಂದು ಪರಿಗಣಿಸಲಾಗಿದೆ.

**ಸಕ್ಕರೆಯನ್ನು ನಿಯಂತ್ರಿಸುತ್ತದೆ**

ನೀವು ಮಧುಮೇಹ ರೋಗಿಗಳಾಗಿದ್ದರೆ ರಾಗಿ ಹಿಟ್ಟು ನಿಮಗೆ ತುಂಬಾ ಪ್ರಯೋಜನಕಾ-ರಿಯಾಗಿದೆ. ಅಂತಹ ಪರಿಸ್ಥಿತಿಯಲ್ಲಿ ಸಕ್ಕರೆಯನ್ನು ನಿಯಂತ್ರಣದಲ್ಲಿಡಲು, ಪ್ರತಿದಿನ ರಾಗಿ ಹಿಟ್ಟನ್ನು ಸೇವಿಸಿ. ರಾಗಿಯು ಹೆಚ್ಚಿನ ಪಾಲಿಫಿನಾಲ್‌ಗಳು ಮತ್ತು ಆಹಾರದ ಫೈಬರ್‌ನಲ್ಲಿ ಸಮೃದ್ಧವಾಗಿದೆ, ಇದು ದೇಹದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸುತ್ತದೆ. ಬೆಳಗಿನ ಉಪಾಹಾರದಿಂದ ರಾತ್ರಿ ಊಟದವರೆಗೆ ಇದನ್ನು ಸೇವಿಸುವುದು ಪ್ರಯೋಜನಕಾರಿ.

**ಒತ್ತಡ ಕಡಿಮೆಯಾಗುತ್ತದೆ**

ಇಂದಿನ ಕಾಲದಲ್ಲಿ, ಒತ್ತಡವು ಪ್ರತಿಯೊಬ್ಬರ ಜೀವನದ ಸಾಮಾನ್ಯ ಭಾಗವಾಗಿದೆ. ಅಂತಹ ಪರಿಸ್ಥಿತಿಯಲ್ಲಿ ನೀವು ರಾಗಿಯ ಸಹಾಯದಿಂದ ಅದನ್ನು ಕಡಿಮೆ ಮಾಡಬಹುದು. ರಾಗಿಯಲ್ಲಿ ಹೇರಳವಾದ ಉತ್ಕರ್ಷಣ ನಿರೋಧಕಗಳು ಇದ್ದು ಇದು





ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ರಾಗಿಯನ್ನು ಆತಂಕ, ಖಿನ್ನತೆ ಮತ್ತು ನಿದ್ರಾಹೀನತೆಗೆ ಅತ್ಯಂತ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ.

**ರಕ್ತಹೀನತೆಯ ಚಿಕಿತ್ಸೆ**

ರಾಗಿಯಲ್ಲಿ ಹೆಚ್ಚಿನ ಪ್ರಮಾಣದ ಕಬ್ಬಿಣದ ಅಂಶವಿದ್ದು ಇದು ರಕ್ತಹೀನತೆಗೆ ಚಿಕಿತ್ಸೆ ನೀಡುತ್ತದೆ. ದೇಹದಲ್ಲಿ ಹಿಮೋಗ್ಲೋಬಿನ್ ಕಡಿಮೆಯಿದ್ದರೆ ರಾಗಿಯನ್ನು ಸೇವಿಸಿ. ರಾಗಿಯನ್ನು ಮೊಳಕೆಯೊಡೆದು ತಿಂದರೆ ವಿಟಮಿನ್ ಸಿ ಪ್ರಮಾಣ ಹೆಚ್ಚುತ್ತದೆ. ಇದರಲ್ಲಿರುವ ಕಬ್ಬಿಣವು ದೇಹದಲ್ಲಿ ಸುಲಭವಾಗಿ ಜೀರ್ಣವಾಗುತ್ತದೆ ಮತ್ತು ರಕ್ತದಲ್ಲಿ ಸುಲಭವಾಗಿ ಕರಗುತ್ತದೆ.

**ತೂಕ ನಿಯಂತ್ರಣ**

ಇತ್ತೀಚಿನ ದಿನಗಳಲ್ಲಿ, ತೂಕ ಹೆಚ್ಚಾಗುವುದು ಎಲ್ಲ-ರಿಗೂ ಸಮಸ್ಯೆಯಾಗಿದೆ, ಅಂತಹ ಪರಿಸ್ಥಿತಿಯಲ್ಲಿ ರಾಗಿ ಹಿಟ್ಟು ನಿಮಗೆ ಸಹಾಯ ಮಾಡುತ್ತದೆ. ಇದು ಫೈಬರ್ ಅನ್ನು ಹೊಂದಿರುತ್ತದೆ, ಇದು ತ್ವರಿತವಾಗಿ ಜೀರ್ಣವಾಗುವುದಿಲ್ಲ, ಇದರಿಂದಾಗಿ ನಿಮ್ಮ ಹೊಟ್ಟೆಯು ದೀರ್ಘಕಾಲದವರೆಗೆ ತುಂಬಿರುತ್ತದೆ. ಅಂತಹ ಪರಿಸ್ಥಿತಿಯಲ್ಲಿ, ನೀವು ಅತಿಯಾಗಿ ತಿನ್ನುವುದ-ರಿಂದ ತಪ್ಪಿಸಬಹುದು. ಇದನ್ನು ಸೇವಿಸುವುದರಿಂದ ನಿಮಗೆ ದೀರ್ಘಕಾಲ ಹಸಿವಾಗುವುದಿಲ್ಲ ಮತ್ತು ನಿಮ್ಮ ತೂಕವು ನಿಯಂತ್ರಣದಲ್ಲಿರುತ್ತದೆ.

# ರೈಸ್‌ಬಾತ್ ಪಲಾವ್‌ಗೆ ಬಳಸುವ ಈ ಎಲೆಗಳ ಚಹಾ ಮಾಡಿ ಕುಡಿದರೆ, ಮಧುಮೇಹ ಕ್ಯಾನ್ಸರ್ ನಂತಹ ಕಾಯಿಲೆಯನ್ನು ನಿಯಂತ್ರಿಸಬಹುದು!

ನಮ್ಮ ಲೋಕಲ್ ಭಾಷೆಯಲ್ಲಿ ಪಲಾವ್ ಎಲೆಗಳು ಎಂದು ಕರೆಯಲ್ಪಡುವ ಬೇ ಲೀಫ್ ಹೆಚ್ಚಾಗಿ ಪಲಾವ್, ಟೊಮೆಟೊ ಬಾತ್ ಮತ್ತು ಇತರ ರೈಸ್ ಬಾತ್ ಗಳಲ್ಲಿ ಬಳಕೆಯಾಗುತ್ತದೆ. ಆದ-'ರೆ ಇದರ ಪ್ರಯೋಜನಗಳು ಇಷ್ಟಕ್ಕೆ ಮಾತ್ರ ಸೀಮಿತವಲ್ಲ! ಈ ಎಲೆಗಳ ಚಹಾ ಮಾಡಿ ಕುಡಿಯುವುದರಿಂದ ಹಲವಾರು ಬಗೆಯ ಆರೋಗ್ಯ ಪ್ರಯೋಜನಗಳು ಸಿಗುತ್ತವೆ ಎಂದು ಅಧ್ಯಾಯನ ವರದಿಗಳು ತಿಳಿಸಿವೆ.

ರೈಸ್‌ಬಾತ್ ಪಲಾವ್‌ಗೆ ಬಳಸುವ ಈ ಎಲೆಗಳ ಚಹಾ ಮಾಡಿ ಕುಡಿದರೆ, ಮಧುಮೇಹ ಕ್ಯಾನ್ಸರ್ ನಂತಹ ಕಾಯಿಲೆಯನ್ನು ನಿಯಂತ್ರಿಸಬಹುದು!

ಬೇ ಲೀವ್ಸ್ ಅಂದರೆ ಪಲಾವ್ ಎಲೆಗಳನ್ನು ನಾವು ಹಲವಾರು ಖಾದ್ಯಗಳಿಗೆ ಬಳಕೆ ಮಾಡುತ್ತೇವೆ. ಅದರಲ್ಲೂ ಮಾಂಸದಡುಗೆಗೆ ಇದು ಇಲ್ಲದೆ ನಡೆಯುವುದೇ ಇಲ್ಲ. ಗರಂ ಮಸಾಲೆ ಗಳಲ್ಲಿ ಒಂದಾಗಿರುವಂತಹ ಇದು ಖಾದ್ಯದ ರುಚಿ ಹೆಚ್ಚಿಸುವ ಜತೆಗೆ ಹಲವಾರು ಬಗೆಯ ಆರೋಗ್ಯ ಲಾಭಗಳನ್ನು ಕೂಡ ನೀಡುವುದು. ಇದು ಒಳ್ಳೆಯ ಸುವಾಸನೆಯ ಮೂಲಕ ತನ್ನತ್ತ ಸೆಳೆಯುವುದು ಕೂಡ.

ಇದರಲ್ಲಿ ವಿಟಮಿನ್ ಎ, ಸಿ, ಕಬ್ಬಿಣಾಂಶ, ಪೊಟ್ಯಾಶಿಯಮ್, ಆ?ಯಂಟಿಆಕ್ಸಿಡೆಂಟ್, ಕ್ಯಾಲ್ಸಿಯಂ ಹಾಗೂ ಮೆಗ್ನಿಶಿಯಂ ಇದ್ದು, ಇದು ಹೊಟ್ಟೆಯ ಸಮಸ್ಯೆಗಳಿಗೆ ಅದ್ಭುತವಾಗಿ ಕೆಲಸ ಮಾಡುವುದು. ಹಾಗಾದರೆ ನೇರವಾಗಿ ಇದನ್ನು ಸೇವನೆ ಮಾಡಬಹುದೇ ಎನ್ನುವ ಗೊಂದಲವು ಕೆಲವರಲ್ಲಿ ಇದ್ದೇ ಇದೆ. ಆದರೆ ಇದು ಹಾಗಲ್ಲ, ನಾವು ಗರಂ ಮಸಾಲೆ, ಖಾದ್ಯಗಳಿಗೆ ಬಳಸುವಂತಹ ಪಲಾವ್ ಎಲೆಗಳನ್ನು ಚಹಾ ರೂಪದಲ್ಲಿ ಕೂಡ ಸೇವನೆ ಮಾಡಬಹುದು. ಹೌದು, ಪಲಾವ್ ಎಲೆಯ ಚಹಾ ಕುಡಿದರೆ, ಆಗ ಇದರಿಂದ ಮಧುಮೇಹ ವಿರೋಧಿ, ಆ?ಯಂಟಿಆಕ್ಸಿಡೆಂಟ್, ಮೂತ್ರವರ್ಧಕ ಮತ್ತು ಹಸಿವು ಹೆಚ್ಚಿಸುವ ಗುಣಗಳು ದೇಹಕ್ಕೆ ಲಭ್ಯವಾಗಲಿದೆ. ಇದರ ರುಚಿಂ-ಮು ಗ್ರೀನ್ ಟೀಗಿಂತಲೂ ತುಂಬಾ ಉತ್ತಮವಾಗಿರುವುದು. ಇನ್ನು ಮುಂದೆ ಇದನ್ನು ಬಳಸಿಕೊಂಡು ಆರೋಗ್ಯವನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿ.

**ಬೇ ಲೀವ್ಸ್ ಚಹಾ ಎಂದರೇನು?**

ಬೇ ಲೀವ್ಸ್‌ನ್ನು ನೀರಿಗೆ ಹಾಕಿ ಅದನ್ನು ಸೇವನೆ ಮಾಡುವುದು ಬೇ ಲೀವ್ಸ್ ಚಹಾ. ಇದಕ್ಕೆ ದಾಲ್ಚಿನಿ ಜತೆಗೆ ಲಿಂಬೆ ಹಾಗೂ ಜೇನುತುಪ್ಪ ಕೂಡ ಬೆರೆಸಬಹುದು. ಇಷ್ಟೆಲ್ಲಾ ಹೇಳಿದ ಬಳಿಕ ಬೇ ಲೀವ್ಸ್ ಚಹಾ ಮಾಡುವುದು ಹೇಗಪ್ಪಾ ಎನ್ನುವ ಗೊಂದಲವು ನಿಮ್ಮಲ್ಲಿ ಇದ್ದರೆ, ಆಗ ನೀವು ಸ್ವಲ್ಪ ನೀರನ್ನು ಬಿಸಿ ಮಾಡಿಕೊಂಡು, ಅದಕ್ಕೆ ಕೆಲವು ಪಲಾವ್ ಎಲೆಗಳನ್ನು ಹಾಗೂ ಮೇಲೆ ಹೇಳಿದ ಸಾಮಗ್ರಿಗಳನ್ನು ಹಾಕಿ. ಇದನ್ನು ಕುದಿಯಲು ಬಿಡಿ. ಇದನ್ನು ಸೋಸಿಕೊಂಡ ಬಳಿಕ ಅದಕ್ಕೆ ನಿಮ್ಮ ಇಷ್ಟದ ಸಿಹಿ ಹಾಕಿಕೊಂಡು ಕುಡಿಯಿರಿ.





**ಬೇ ಲೀವ್ಸ್ ಚಹಾದ ಲಾಭಗಳು**

ನಾವು ಸಾಮಾನ್ಯವಾಗಿ ಕುಡಿಯುವ ಚಹಾಕ್ಕಿಂತ ಬೇ ಲೀವ್ಸ್‌ನ ಚಹಾ ತುಂಬಾ ಆರೋಗ್ಯ ಲಾಭಗಳನ್ನು ನೀಡುವುದು. ಅಂತಹ ಲಾಭಗಳ ಬಗ್ಗೆ ತಿಳಿಯಿರಿ.

ಮಧುಮೇಹಿಗಳಿಗೆ ನೆರವಾಗುವುದು: ಟೈಪ್ 2 ಮಧುಮೇಹಿಗಳಲ್ಲಿ ಬೇ ಲೀವ್ಸ್ನ ಎಲೆಯು ಗ್ಲುಕೋಸ್ ಮತ್ತು ಲಿಪಿಡ್ ಪ್ರೊಫೈಲ್ ನ್ನು ಸುಧಾರಣೆ ಮಾಡುವುದು ಎಂದು Journal of Clinical Biochemistry and Nutrition ಅಧ್ಯಯನಗಳು ಕೂಡ ಹೇಳಿವೆ. ಹೀಗಾಗಿ ಈ ಎಲೆಗಳು ಟೈಪ್ 2 ಮಧುಮೇಹದ ಚಿಕಿತ್ಸೆಗೆ ತುಂಬಾ ಪರಿಣಾಮಕಾರಿ ಹಾಗೂ ಇದು ಇನ್ಸುಲಿನ್ ಸೂಕ್ಷ್ಮತೆ ಸುಧಾರಿಸುವುದು.

**ಜೀರ್ಣಕ್ರಿಯೆ ಸುಧಾರಣೆ**

ಜಠರಕರುಳಿನಲ್ಲಿ ಉತ್ತೇಜನ ಉಂಟು ಮಾಡಿ, ಜೀರ್ಣಕ್ರಿಯೆ ಸುಧಾರಣೆ ಮಾಡುವಲ್ಲಿ ಪಲಾವ್ ಎಲೆಗಳು ತುಂಬಾ ಪರಿಣಾಮ ಕಾರಿ ಮತ್ತು ಇದು ಮೂತ್ರವರ್ಧಕವಾಗಿ ಕೆಲಸ ಮಾಡುವುದು. ಮಲಬದ್ಧತೆಯನ್ನು ಈ ಚಹಾ ತುಂಬಾ ಪರಿಣಾಮಕಾ-ರಿಯಾಗಿ ನಿವಾರಿಸುವುದು. ಅದೇ ರೀತಿಯಲ್ಲಿ ಕರುಳಿನ ಆರೋಗ್ಯವನ್ನು ಕಾಪಾಡಿ, ಹಸಿವನ್ನು ಹೆಚ್ಚಿಸಲು ನೆರವಾಗುವುದು ಎಂದು ಈಠಂಜ ಖಭಿಜಟಿಭಿಜ & ಓಣಡಿಡುಣುಔಟಿ ನಲ್ಲಿ ಪ್ರಕಟನೆಗೊಂಡಿದೆ

**ಹೃದಯದ ಆರೋಗ್ಯಕ್ಕೆ ಒಳ್ಳೆಯದು**

ಪಲಾವ್ ಎಲೆಗಳು ಹೃದಯದ ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಯಾಕೆಂದರೆ ಇದರಲ್ಲಿ ಇರುವಂತಹ ಪೊಟಾಶಿಯಂ, ಆ?ಯಂಟಿ ಆಆಕ್ಸಿಡೆಂಟ್ ಮತ್ತು ಕಬ್ಬಿಣಾಂಶದ ಸಂಂ-ಯೋಜನೆಯು ಹೃದಯಕ್ಕೆ ಲಾಭಕಾರಿ. ಈ ಸಂಯೋಜನೆಯು ರಕ್ತದೊತ್ತಡ ತಗ್ಗಿಸುವುದು ಹಾಗೂ ಹೃದಯದ ಲಯವನ್ನು ಸರಿಯಾಗಿಡುವುದು.

ಬೇ ಲೀವ್ಸ್ ಕೇವಲ ಏಳು ದಿನಗಳಲ್ಲಿ ಕೆಟ್ಟ ಕೊಲೆಸ್ಟ್ರಾಲ್ ನ್ನು ತಗ್ಗಿಸಿದೆ ಎಂದು



Transforming Healthcare in Low-Resource Settings ಅಧ್ಯಯನಗಳು ಕೂಡ ಕಂಡುಕೊಂಡಿದೆ.

girl immunity edit istock

ವಿಟಮಿನ್ ಸಿ ಹೊಂದಿರುವ ಪಲಾವ್ ಎಲೆಗಳು ಪ್ರತಿರೋಧಕ ಶಕ್ತಿ ವೃದ್ಧಿ ಮಾಡುವುದು ಮತ್ತು ಬ್ಯಾಕ್ಟೀ-ರಿಯಾ ವಿರೋಧಿಯಾಗಿ ಕೂಡ ಕೆಲಸ ಮಾಡುವುದು. ಇದರಿಂದ ಸೋಂಕುಗಳು ದೂರವಿರುವುದು. ಪಲಾವ್ ಎಲೆಗಳಲ್ಲಿ ಉರಿಯೂತ ವಿರೋಧಿ ಮತ್ತು ಮಧುಮೇಹ ವಿರೋಧಿ ಗುಣಗಳು ಇವೆ. ಇದು ಪ್ರತಿರೋಧಕ ಶಕ್ತಿ ವೃದ್ಧಿ ಮಾಡುವುದು ಎಂದು Medicinal Plants of South Asia ತನ್ನ ವರದಿಯಲ್ಲಿ ತಿಳಿಸಿದೆ

**ಕ್ಯಾನ್ಸರ್‌ಗೆ ಚಿಕಿತ್ಸೆ**

ಬೇ ಲೀವ್ಸ್ ಒಳ್ಳೆಯ ಔಷಧೀಯ ಗುಣಗಳು ಇವೆ ಮತ್ತು ಇದು ಕ್ಯಾನ್ಸರ್ ಚಿಕಿತ್ಸೆಗೆ ಸಹಕಾರಿ.

ಇದರಲ್ಲಿ ಇರುವಂತಹ ಉರಿಯೂತ ಶಮನಕಾರಿ ಗುಣವು ದೇಹದ ಉರಿಯೂತ ಕಡಿಮೆ ಮಾಡು ವುದು. ಅಷ್ಟೇ ಅಲ್ಲದೆ ಮೊದಲೇ ಹೇಳಿದಂತೆ ಈ ಎಲೆಗಳಲ್ಲಿಆಂಟಿ ಆಕ್ಸಿಡೆಂಟ್ ಲಕ್ಷಣಗಳು ಇರುವುದರಿಂದ ಕ್ಯಾನ್ಸರ್ ಜೀವಕೋಶಗಳ ವಿರುದ್ಧ ಹೋರಾಡುವ ಗುಣ, ಸಾಮರ್ಥ್ಯ ಇದರಲ್ಲಿ ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತದೆ.

ವಿಶೇಷವಾಗಿ ಫ್ರೀ ರಾಡಿಕಲ್ ಅಂಶಗಳ ವಿರುದ್ಧ ಹೋರಾಡುವ ಫೈಟೋ ಕೆಮಿಕಲ್ ಅಂಶಗಳು ಇದರಲ್ಲಿ ಹೇರಳವಾಗಿ ಕಂಡುಬರುತ್ತವೆ ಎಂದು ಅಧ್ಯಾಯನಗಳು ತಮ್ಮ ವರದಿಯಲ್ಲಿ ತಿಳಿಸಿವೆ.

**ಬೇ ಲೀವ್ಸ್ ಎಲೆಯ ಚಹಾ ತಯಾ-ರಿಸುವ ವಿಧಾನ**

ಬೇಕಾಗುವ ಸಾಮಾಗ್ರಿಗಳುಮೂರು ಪಲಾವ್ ಎಲೆಗಳು

ಒಂದು ಚಿಟಿಕೆ ದಾಲ್ಚಿನ್ನಿ ಪುಡಿ

ಎರಡು ಕಪ್ ನೀರು

ಲಿಂಬೆ ಮತ್ತು ಜೇನುತುಪ್ಪ(ಅಗತ್ಯವಿದ್ದರೆ)

ತಯಾರಿಸುವ ವಿಧಾನ: ಪಲಾವ್ ಎಲೆಗಳನ್ನು ತೊಳೆಯಿರಿ ಮತ್ತು ಅದನ್ನು ಕುದಿಯುವ ನೀರಿಗೆ ಹಾಕಿ

ಇದರ ಜತೆಗೆ ದಾಲ್ಚಿನ್ನಿ ಹುಡಿಯನ್ನು ಹಾಕಿ ಮತ್ತು 10 ನಿಮಿಷ ಕುದಿಯಲು ಬಿಡಿ.

ಇದರ ಬಳಿಕ ಸೋಸಿಕೊಂಡು ಒಂದು ಕಪ್ ಗೆ ಇದನ್ನು ಹಾಕಿ. ರುಚಿಗೆ ತಕ್ಕಂತೆ ಲಿಂಬೆ ಅಥವಾ ಜೇನುತುಪ್ಪ ಹಾಕಿಕೊಂಡು ಕುಡಿಯಿರಿ.

**ಪಲಾವ್ ಎಲೆಗಳ ಅಡ್ಡಪ-ರಿಣಾಮಗಳು**

ಬೇ ಲೀವ್ಸ್ ಚಹಾ ಒಂದು ಅದ್ಭುತ ಆಯ್ಕೆಯಾಗಿದ್ದರೂ ಇದನ್ನು ಅತಿಯಾಗಿ ಸೇವನೆ ಮಾಡಿದರೆ ಆಗ ಇದ-ರಿಂದ ತೂಕಡಿಕೆ ಬರಬಹುದು. ಇದು ಉಸಿರಾಟ ನಿಧಾನವಾಗಿಸಬಹುದು. ಇದರಿಂದ ತಲೆನೋವು ಮತ್ತು ಹೊಟ್ಟೆ ಉಬ್ಬರ ಕೂಡ ಬರಬಹುದು.

# ನಂದಿಬಟ್ಟಲು ಹೂವಿನ ಉಪಯೋಗಗಳು



ನಂದಿಬಟ್ಟಲು ಹೂವು ಅಥ-'ವಾ ನಂಜಬಟ್ಟಲ ಹೂವು ಮನೆಯ ಅಂಗಳದಲ್ಲಿ ಬೆಳೆಸುವ ಹೂವು. ಮನಸ್ಸಿಗೆ ಉಲ್ಲಾಸಗೊಳಿಸುವ ಜೊತೆಗೆ ನಮಗೆ ಆರೋಗ್ಯವನ್ನು ಸೌಂದರ್ಯವನ್ನು ಕೊಡುತ್ತದೆ.

ಅಂಗೈಯಲ್ಲೇ ಔಷಧಿ ಇದೆ ಎನ್ನುವುದನ್ನು ಮರೆತಿದ್ದೇವೆ. ಪ್ರತಿಯೊಂದು ಜಾಗದಲ್ಲಿ ಇರುವ ಆಯಾಯ ಪುಷ್ಪಗಳು ಸಸ್ಯಗಳನ್ನು ಬಳಸುವುದರಿಂದ ಸಾಕಷ್ಟು ಅನುಕೂಲ ವಾಗುತ್ತದೆ.

ಕಣ್ಣಿನ ಹೊಳಪು, ಕಣ್ಣಿನ ಚೆಂದ ಹೆಚ್ಚಿಸುವುದು. ಈ ಕಪ್ಪು ಕಣ್ಣಿನ ದೃಷ್ಟಿಶಕ್ತಿಯನ್ನು ಹೆಚ್ಚಿಸುತ್ತದೆ. ಕಣ್ಣಿನ ನವೆ ಆಗುವುದು, ಕಲುಷಿತ ಆಗುವುದನ್ನು ತಡೆಗಟ್ಟುತ್ತದೆ. ಕಣ್ಣಿನ ರೆಪ್ಪೆಯ ಕೂದಲನ್ನು ಮೃದವಾಗಿ ಇಡುತ್ತದೆ ಹಾಗೂ ರಕ್ಷಿಸುತ್ತದೆ.

1. ನಂಜಬಟ್ಟಲಿನ ಹೂವಿನ ಕಾಡಿಗೆ ತಯಾರಿಸುವ ವಿಧಾನ: ಹತ್ತಿಯನ್ನು ಅಥವಾ ಹತ್ತಿ ಬಟ್ಟೆಯನ್ನು ನಂಜಬಟ್ಟಲು ಹೂವಿನ ರಸದಲ್ಲಿ ಅದ್ದಿ ಹತ್ತಿಯನ್ನು ಒಣಗಿಸಬೇಕು. ಈ ರೀತಿ 7 ದಿನಗಳ ಕಾಲ ಮಾಡಬೇಕು. ನಂತರ ಈ ಬಟ್ಟೆ ಅಥವಾ ಹತ್ತಿಯನ್ನು ಒಳ್ಳೆಯ ಹರಳೆಣ್ಣೆಯಲ್ಲಿ ಮುಳುಗಿಸಿ ಬತ್ತಿಯಂತೆ ಮಾಡಿ ದೀಪ ಹಚ್ಚಬೇಕು. ದೀಪದ ಉರಿ ತಗಲುವಂತೆ ಒಂದು ತಟ್ಟೆಯಲ್ಲಿ ಅಥವಾ ಬಟ್ಟಲಲ್ಲಿ ಇಡಬೇಕು. ಆ ತಟ್ಟೆಗೆ ದೀಪದ ಮಸಿಯೆಲ್ಲಾ ಅಂಟಿ-ಕೊಂಡಿರುತ್ತದೆ. ಇದನ್ನು ಶುದ್ಧವಾದ ಬಟ್ಟಲಿಗೆ ಬಗ್ಗಿಸಿಕೊಂಡು ಪಚ್ಚಕರ್ಪೂರ ಬೆರೆಸಿ ಗಟ್ಟಿಯಾದ ಬೆಣ್ಣೆಗೆ ಹಾಕಿ ಬೆರೆಸಿ ಡಬ್ಬಿಗೆ ಹಾಕಿ ಇಟ್ಟುಕೊಳ್ಳಿ. ಇದನ್ನು ಕಣ್ಣಿಗೆ ಪ್ರತಿನಿತ್ಯ ಹಚ್ಚಿಕೊಳ್ಳುವುದರಿಂದ, ಸಣ್ಣವಯಸ್ಸಿನಲ್ಲಿ ಕನ್ನಡಕ ಹಾಕುವುದು ತಪ್ಪುತ್ತದೆ.

2. ರಕ್ತಭೇದಿ: ರಕ್ತಭೇದಿಯಾಗುತ್ತಿದ್ದರೆ ನಂಜಬಟ್ಟಲ ಹೂವು, ಜೀರಿಗೆ, ಕಲ್ಲುಸಕ್ಕರೆಯನ್ನು ಸೇರಿಸಿ ಅರೆದು ಹಾಲಿನೊಂದಿಗೆ ಸೇವಿಸಬೇಕು.

3. ಜಂತುಹುಳು: ಹೊಟ್ಟೆಯಲ್ಲಿ ಜಂತುಹುಳು ಇದ್ದಾಗ ನಂಜಬಟ್ಟಲು ಗಿಡದ ಎಲೆಗಳ ರಸಕ್ಕೆ ಇಂಗಿನಪುಡಿ ಸೇರಿಸಿ ಸೇವಿಸಿದರೆ, ಜಂತು ಹುಳುವಿನ ಬಾಧೆ ನಿವಾರಣೆಯಾಗುತ್ತದೆ.

4. ಹಲ್ಲುನೋವು: ನಂಜಬಟ್ಟಲು ಗಿಡದ ಬೇರು ಅಥವಾ ತೊಗಟೆಯನ್ನು ಬಾಯಲ್ಲಿ ಚಪ್ಪರಿಸುವುದರಿಂದ ಹಲ್ಲುನೋವು ಕಡಿಮೆ ಆಗುತ್ತದೆ.

5. ಚರ್ಮದ ಸಮಸ್ಯೆಗೆ: ಚರ್ಮದಲ್ಲಿ ಉರಿ, ನವೆ, ಉಂಟಾದಾಗ ನಂಜಬಟ್ಟಲ ಹೂವಿನ ರಸವನ್ನು ಹಚ್ಚುವುದರಿಂದ, ಸಮಸ್ಯೆಗಳು ನಿವಾರಣೆಯಾಗುತ್ತದೆ.

6. ನಂಜಬಟ್ಟಲ ಹೂವಿನ ಕಷಾಯ: ನಂಜಬಟ್ಟಲು ಹೂವಿನಿಂದ ಕಷಾಯವನ್ನು ಮಾಡಿ ಕಣ್ಣನ್ನು ತೊಳೆಯುತ್ತಿದ್ದರೆ, ಕಣ್ಣುರಿ, ಕಣ್ಣು ಕೆಂಪಾಗುವುದನ್ನು ತಪ್ಪಿಸ ಬಹುದು.

7. ನಿದ್ರಾಹೀನತೆ: ನಂಜಬಟ್ಟಲು ಹೂವನ್ನು ಹೊಟ್ಟೆಗೆ ಸೇವಿಸುವುದ-ರಿಂದ ಹಾಗೂ ಹೆಂಗಸರು ತಲೆಯಲ್ಲಿ ಮುಡಿಯುವುದರಿಂದ ಸುಖ ನಿದ್ರೆ ಬರುತ್ತದೆ.

8. ಮುಟ್ಟಿನಸಮಸ್ಯೆ: ಸ್ತ್ರೀಯ-ರಿಗೆ ಮುಟ್ಟು ನಿಲ್ಲುವ ಸಂದರ್ಭದಲ್ಲಿ ಬರುವ ಸಮಸ್ಯೆಗಳಿದ್ದಾಗ ನಂಜಬಟ್ಟಲು ಗಿಡದ ಎಲೆಗಳನ್ನು ಕಲ್ಕಮಾಡಿ ಸೇವಿಸಿದರೆ, ಸ್ತ್ರೀಯರು ಈ ಭಾಧೆಯಿಂದ ಮುಕ್ತವಾಗಬಹುದು.

# ಯಶಸ್ಸು ಸಾಧಕರ ಬೆನ್ನು ಬೀಳುತ್ತದೆ: ರಾಮಣ್ಣ ಗಸ್ತಿ

## ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಹಿಡಕಲ್ ಸೂರಣ್ಣವರ ತೋಟದ ಸರಕಾರಿ ಪ್ರಾಥಮಿಕ ಶಾಲೆಯ ಬಾಲಕಿಯರ ಕಬಡ್ಡಿ ತಂಡಕ್ಕೆ ಸನ್ಮಾನ



**ಹಾರೂಗೇರಿ:** ಬಡತನವೆನ್ನುವುದು ಕಷ್ಟವಾಗಿ 'ಬಾರದು, ಸ್ವಾಭಿಮಾನಕ್ಕೆ ಸವಾಲಾಗಬೇಕು. ಬಡತನಕ್ಕೆ ಪಲಾಯನವೇ ದಾರಿಯಾಗಬಾರದು, ಅದನ್ನು ಹಿಮ್ಮೆಟ್ಟಿಸುವ ಛಲವಿರಬೇಕು. ಕ್ಷಣಿಕ ಸುಖ ತ್ಯಾಗ ಮಾಡಿ, ಏಕಲವ್ಯನ ರೀತಿ ಸತತ ಪ್ರಯತ್ನದ ಮೂಲಕ ಸಾಧಿಸಿ ತೋರಿಸಬೇಕು. ಸತ್ಕಾರ ರೂಪದಲ್ಲಿ ಪ್ರತಿಫಲ ಸಿಗುತ್ತದೆ ಎಂದು ರಾಜ್ಯ ವಾಲ್ಮೀಕಿ ಪ್ರಶಸ್ತಿ ಪುರಸ್ಕೃತರಾದ ರಾಮಣ್ಣ ಗಸ್ತಿ ಹೇಳಿದರು.

ಹಾರೂಗೇರಿಯ ವಾಲ್ಮೀಕಿ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಜಿಲ್ಲಾ ಚೆನ್ನದಾಸರ ಕ್ಷೇಮಾಭಿವೃದ್ಧಿ ಸಂಘ ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘ ಜಂಟಿಯಾಗಿ ಆಯೋಜಿಸಿದ್ದ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಹಿಡಕಲ್ ಸೂರಣ್ಣವರ ತೋಟದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಾಲಕಿಯರ ಕಬಡ್ಡಿ ತಂಡಕ್ಕೆ ಹಾಗೂ ನೂತನವಾಗಿ ಪಿಎ□□□ ಆಗಿ ಆಯ್ಕೆಯಾಗಿರುವ ಅಂಬಿಕಾ ಪರಶುರಾಮ ಗಾಣಿಗೇರ ಅವರ ಸತ್ಕಾರ ಸಮಾರಂಭದಲ್ಲಿ ಅತಿಥಿಯಾಗಿ ಮಾತನಾಡಿದರು.

ಒಂದೇ ಶಾಲೆಯ ಒಂದೇ ಸಮುದಾಯದ ಮಕ್ಕಳು ಒಂದೇ ಕ್ರೀಡೆಯ ತಂಡದಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುವುದು ಸಾರ್ವಕಾಲಿಕ ಐತಿಹಾಸಿಕ ದಾಖಲೆಯಾಗಿದೆ. ದಲಿತ ಸಮುದಾಯದಲ್ಲೇ ಅತಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಅಲೆಮಾರಿ ಚೆನ್ನದಾಸರ ಸಮುದಾಯದ ಬಾಲಕಿಯರು ಈ ಸಾಧನೆ ಮಾಡಿರುವುದು ಆ ಸಮುದಾಯದ ಏಳಿಗೆಯ ದೃಷ್ಟಿಯಿಂದ ಇದೊಂದು ಮೈಲುಗಲ್ಲು. ಅವರು ನಮ್ಮ ಸಂಸ್ಥೆಯಲ್ಲಿ ಪದವಿ ಶಿಕ್ಷಣ-ಕ್ಕೆ ಬಂದರೆ ಉಚಿತವಾಗಿ ಶಿಕ್ಷಣ ನೀಡುತ್ತೇವೆ ಎಂದು ಭರವಸೆ ನೀಡಿ ಅಭಿನಂದಿಸಿದರು. ಸ್ಥಳೀಯ ಸಿಪಿಐ ಡಿ. ಬಿ. ರವಿಚಂದ್ರ ಅವರು ಮಹಿಳೆಯರ ಸಶಕ್ತೀಕರಣದ ಮೇಲೆಯೇ ಅಲ್ಲಿನ ಸಮಾಜದ ಅಭಿವೃದ್ಧಿ ಅವಲಂಬಿಸಿರುತ್ತದೆ. ಪಿಎ□□□ ಆಗಿ ಆಯ್ಕೆಯಾಗಿರುವ ಅಂಬಿಕಾ ಗಾಣಿಗೇರರವರು ತಂದೆ ತಾಯಿಯರ ಋಣದಂತೆ ಸಮಾಜದ ಋಣವನ್ನು ತೀರಿಸಬೇಕು. ಇಂದಿನ ಸಂಕೀರ್ಣ ವ್ಯವಸ್ಥೆಯಲ್ಲಿ ಪೊಲೀಸ್ ಇಲಾಖೆಯ ಕರ್ತವ್ಯ ನಿರ್ವಹಣೆ ಅತ್ಯಂತ ಸವಾಲಿನದಾಗಿದ್ದು ಅದನ್ನು ನಿಷ್ಠೆಯಿಂದ ಮಾಡಿ ಯಶಸ್ಸನ್ನು ಸಾಧಿಸಬೇಕು. ಕಬ್ಬಡ್ಡಿ ತಂಡದ ಬಾಲಕಿಯರು ಅಂಬಿಕಾ ಅವರ ಸಾಧನೆಯನ್ನು ಮಾದರಿಯಾಗಿ-ರಿಸಿಕೊಂಡು ಪ್ರಯತ್ನಪಟ್ಟು ಉನ್ನತ ಸ್ಥಾನಗಳನ್ನು ಪಡೆಯಬೇಕು ಎಂದರು. ಸಮಾರಂಭದಲ್ಲಿ ಭಾಗವಹಿಸಿದ್ದ ಬಂಡಾಯ ಸಾಹಿತಿ ಡಾ. ಯಲ್ಲಪ್ಪ ಹಿಮ್ಮಡಿ ಅವರು ಆರ್ಥಿಕವಾಗಿ ಹಿಂದುಳಿದ ಕಬಡ್ಡಿ ತಂಡದ ಮೂವರು ಬಾಲಕಿಯ-ರಿಗೆ ಪಿಯುಸಿ ಪೂರ್ಣಗೊಳ್ಳುವವರೆಗೂ ಶೈಕ್ಷಣಿಕ ದತ್ತು ತೆಗೆದುಕೊಂಡು ಓದಿಸುವುದಾಗಿ ವಾಗ್ದಾನ ಮಾಡಿದರು. ವಿಶೇಷ ಆಹ್ವಾನಿತರಾಗಿ ಶಾನೂರಕುಮಾರ ಗಾಣಿಗೇರ, ಶಿವಾನಂದ ಕಾಮಶೆಟ್ಟಿ ಹಾಗೂ ಅಂಬಿಕಾ ಗಾಣಿಗೇರ ಮಾತನಾಡಿದರು. ಚೆನ್ನದಾಸರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದ ಅಧ್ಯಕ್ಷರಾದ ಮಾರುತಿ ಸಣ್ಣಕ್ಕಿನವರ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವಕೀಲ ಲಕ್ಷ್ಮಣ ಟಿ ಅಕ್ಕೆನ್ನವರ, ಹನುಮಂತ ತಾಯಪ್ಪ ಸಣ್ಣಕ್ಕಿನವರ, ಬಿ ಎಂ ಮೆನಸಿ, ಲಕ್ಷ್ಮಣ ಗೊಳಸಂಗಿ, ತಾನಾಜಿ ಗಾಣಿಗೇರ, ಹನುಮಂತ ತುಳಸಿಗೇರಿ, ಮಾರುತಿ ಹುಲ್ಲೆನ್ನವರ, ಚಿಂತಾಮಣಿ ಸಣ್ಣಕ್ಕಿನವರ, ಮಹಾದೇವ ಹುಲ್ಲೆನ್ನವರ, ಸತ್ಯಪ್ಪ ಗೊಳಸಂಗಿ, ಸದಾಶಿವ ಜಾಗನೂರ, ರವಿ ಎಚ್ ಹುಲ್ಲೆನ್ನವರ, ಕುಮಾರ್ ದಳವಾಯಿ, ಅಪ್ಪಾಸಾಹೇಬ ದಳವಾಯಿ, ಭೀಮಸೇನ ಅಕ್ಕೆನ್ನವರ, ಕಾವೇರಿ ಸಣ್ಣಕ್ಕಿನವರ, ಇಂದುಮತಿ ಗಾಣಿಗೇರ, ಸುಶೀಲಾ ಗೊಳಸಂಗಿ ಮುಂತಾದವರು ಭಾಗವಹಿಸಿದ್ದರು. ಆರಂಭದಲ್ಲಿ ಹನುಮಂತ ಗಾಣಿಗೇರ ಸ್ವಾಗತಿಸಿದರು, ಉದಯ ಗಾಣಿಗೇರ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶಿವಾಜಿ ಮಾಳಗೆನ್ನವರ ವಂದಿಸಿದರು. ದುರ್ಗಾಪ್ರಸಾದ್ ಅಕ್ಕೆನ್ನವರ್ ನಿರೂಪಿಸಿದರು.

# ವಿಶ್ವಕ್ಕೆ ಸಿ.ವಿ. ರಾಮನ್ ಕೊಡುಗೆ ಅಪಾರ



**ವಿಜಯಪುರ:** ಸಿ.ವಿ. ರಾಮನ್ ಅವರು ಸಂಶೋಧಿಸಿದ ರಾಮನ್ ಎಫೆಕ್ಟ್ ವಿಶ್ವಕ್ಕೆ ಅದ್ಭುತ ಕೊಡುಗೆ. ಅದು ವಿಜ್ಞಾನ ಕ್ಷೇತ್ರದ ಜತೆಗೆ ಮನುಕುಲದ ಉದ್ಧಾರಕ್ಕೆ ಹೆಚ್ಚು ಸಹಕಾರಿಯಾಗಿದೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಅವರು ಗುರುವಾರದಂದು ತಾಲೂಕಿನ ನಾಗಠಾಣ ಗ್ರಾಮದ ಅರಿವು ಕೇಂದ್ರದಲ್ಲಿ ಸರ್ ಸಿ ವಿ ರಾಮನ್ ಜಯಂತಿ ಆಚರಣೆಯನ್ನು ಉದ್ದೇಶಿಸಿ ಮಾತನಾಡಿದರು.ಸರ್ ಸಿ.ವಿ.ರಾಮನ್ ವಿಜ್ಞಾನ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಯನ್ನು ನೀಡುವ ಮೂಲಕ ದೇಶದ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ. ವಿಜ್ಞಾನದ ಅರಿವು ಎಲ್ಲರಿಗೂ ಅತ್ಯಗತ್ಯ ಎಂದು ಹೇಳಿದರು. ಶಿಕ್ಷಕ ಎಸ್ ಆರ್ ಚಾಳೇಕರ ಮಾತನಾಡಿ, ವಿಮಾನ ನಿಲ್ದಾಣದ ಭದ್ರತಾ ತಪಾಸಣೆ ವಿಭಾಗದಲ್ಲಿ ಸರಕುಗಳ ಪರಿವೀಕ್ಷಣೆ ಮಾಡಲು, ಅಲರ್ಜಿಗೆ ಕಾರಣವಾದ ಹಾನಿಕಾರಕ ವಸ್ತುಗಳ ಬಗ್ಗೆ ತಿಳಿಯುವ ಜತೆಗೆ ಅನೇಕ ಕ್ಷೇತ್ರದಲ್ಲಿ ರಾಮನ್ ಎಫೆಕ್ಟ್ ಆವಿಷ್ಕಾರ ಇಂದು ಬಳಕೆಯಾಗುತ್ತಿದೆ ಎಂದು ಹೇಳಿದರು.ಗ್ರಂಥಪಾಲಕ ಮಂಜುನಾಥ ಗಂಗನಳ್ಳಿ ಮಾತನಾಡಿ, ಸರ್ ಚಂದ್ರಶೇಖರ ವೆಂಕಟ-ರಾಮನ್ ಒಬ್ಬ ಭಾರತೀಯ ಭೌತಶಾಸ್ತ್ರಜ್ಞರಾಗಿದ್ದು, ಅವರ ಪ್ರತಿ ಕೆಲಸವು ಭಾರತದ ವಿಜ್ಞಾನ ಲೋಕದಲ್ಲಿ ಅಚ್ಚಳಿಯದೇ ಉಳಿದಿದ್ದು, ವಿಜ್ಞಾನದ ಬಗ್ಗೆ ಎಲ್ಲರೂ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.ಗ್ರಾಮದ ಹಣಮಂತ ವಾಲೀಕಾರ, ರಾಜು ಕತ್ನಳ್ಳಿ, ಪ್ರವೀಣ ಅರಕೇರಿ, ಪ್ರಕಾಶ ಹೊಸಟ್ಟಿ, ಸಚಿನ್ ಹಳ್ಳಿ, ಭರತೇಶ್ ಅರಕೇರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಚೂರು-ಪಾರು

### ಅಕ್ಕಮಹಾದೇವಿ ಪಾರ್ಕನಲ್ಲಿ ಕಾಲೇಜು ವಿದ್ಯಾರ್ಥಿಗಳಿಂದ ಸಸಿ ನೆಡುವ ಕಾರ್ಯಕ್ರಮ




**ಹಾವೇರಿ ನೆಹರು ಯುವ ಕೇಂದ್ರ ಹಾಗೂ ರಾಣೇಬೆನ್ನೂರು ಆರ್.ಟಿ.ಇ.ಎಸ್. ಮಹಾವಿದ್ಯಾಲಯದ ಎನ್.ಎಸ್.ಎಸ್. ಘಟಕದ ಸಹಯೋಗದಲ್ಲಿ ರಾಣೇಬೆನ್ನೂರ ಗೌರಿಶಂಕರ ನಗರದ ಅಕ್ಕಮಹಾದೇವಿ ಪಾರ್ಕ್‌ನಲ್ಲಿ ಸಸಿಗಳನ್ನು ನೆಡಲಾಯಿತು**

**ಹಾವೇರಿ:** ಹಾವೇರಿ ನೆಹರು ಯುವ ಕೇಂದ್ರ ಹಾಗೂ ರಾಣೇಬೆನ್ನೂರು ಆರ್.ಟಿ.ಇ.ಎಸ್. ಮಹಾವಿದ್ಯಾಲಯದ ಎನ್.ಎಸ್.ಎಸ್. ಘಟಕದ ಸಹಯೋಗದಲ್ಲಿ "ಮೈ ಭಾರತ ಜೊತೆ ದಿಪಾವಳಿ ಕಾರ್ಯಕ್ರಮದ ಅಂಗವಾಗಿ ಸೋಮವಾರ ರಾಣೇಬೆನ್ನೂರ ಗೌರಿಶಂಕರ ನಗರದ ಅಕ್ಕಮಹಾದೇವಿ ಪಾರ್ಕ್‌ನಲ್ಲಿ ಸಸಿಗಳನ್ನು ನೆಡಲಾಯಿತು ಹಾಗೂ ಪಾರ್ಕ್‌ನ ಸುತ್ತಮುತ್ತಲಿನ ಆವರಣ ಸ್ವಚ್ಛಗೊಳಿಸಲಾಯಿತು.ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಫಕ್ಕಿರೇಶ ಮಾಚೇನಹಳ್ಳಿ ಅವರು, ನಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಹಾಗೂ ವಿವಿಧ ಸಸಿಗಳನ್ನು ನೆಡುವ ಮೂಲಕ ಸುಂದರ ಪರಿಸರ ಕಾಪಾಡಿಕೊಳ್ಳಬೇಕೆಂದು ಹೇಳಿದರು. ಜಿಲ್ಲಾ ಯುವ ಅಧಿಕಾರಿ ಭುಕ್ಯಾ ಸಂಜೀವ, ಎನ್.ಎಸ್.ಎಸ್. ಸಂಯೋಜಕ ಡಾ. ಸರಸ್ವತಿ ಹೆಚ್. ಬಮ್ಮನಾಳ ಅವರು ಎನ್.ಎಸ್.ಎಸ್ ವಿದ್ಯಾರ್ಥಿಗಳಿಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಿದರು. ಕಾರ್ಯಕ್ರಮದಲ್ಲಿ ಹೇಮಗಿರಿ ಅಂಗಡಿ ಮತ್ತು ಎನ್.ಎಸ್.ಎಸ್. ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ವಡೇರಹಟ್ಟಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳ ಸಾಧನೆ



**ಗೋಕಾಕ:** ಈಚೆಗೆ ಜರುಗಿದ ಜಿಲ್ಲಾಮಟ್ಟದ ಕ್ರೀಡಾ ಕೂಟವು ನವೆಂಬರ ತಿಂಗಳಲ್ಲಿ ದಿನಾಂಕ 29ರಂದು ಮತ್ತು 30 ಜರುಗಿದವು ಇದರಲ್ಲಿ ನಮ್ಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಈ ಕೆಳಗಿನಂತೆ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಆಕಾಶ ರೇವಪ್ಪ ಬೀರನಗಡ್ಡಿ 5 ಕಿ.ಮೀ ನಡಿಗೆಯಲ್ಲಿ ದ್ವಿತೀಯ.ಸಂಗೀತ ನಿಂಗಪ್ಪ ಬಡಿಗೇರ್ 1500 ಮೀಟರ ಓಟದ ಸ್ಪರ್ಧೆಯಲ್ಲಿ ದ್ವಿತೀಯ, ಕೀರ್ತಿ ವಿಟ್ಟಲ್ ತಳವಾರ್ 3000 ಓಟದಲ್ಲಿ ದ್ವಿತೀಯ ಸಂಗೀತ ನಿಂಗಪ್ಪ ಬಡಿಗೇರ್ , ಸಂಜನಾ ನಾಗಪ್ಪ ಕ್ಯಾಸ್ತಿ, ಸಂಗೀತಾ ಲಕ್ಷ್ಮಣ್ ತಿರಕನ್ನವರ, ಉಮಾ ಬಸಪ್ಪ ಚಿಕ್ಕೋಡಿ, ವಿದ್ಯಾರ್ಥಿಗಳ ಸಾಧನೆಗೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಊರಿನ ಗಣ್ಯರು ಹಾಗೂ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ □□□ ಎನ್‌ಬಿ ನಿಪ್ಪಾಣಿ, ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದರು. ದೈಹಿಕ ಶಿಕ್ಷಕರಾದ ಶ್ರೀ ವಿ.ಟಿ ಹೊನಕುಪ್ಪಿ ಹಾಗೂ ಶ್ರೀ ಡಿ.ಎಸ್ ಮಾಳಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿರುತ್ತಾರೆ.

# ಗ್ರಾಪಂ ಉಪ ಚುನಾವಣೆ ವೇಳಾಪಟ್ಟಿ ಪ್ರಕಟ

## ನ.23ಕ್ಕೆ ಮತದಾನ: ಜಿಲ್ಲಾಧಿಕಾರಿ ದಿವ್ಯ ಪ್ರಭ ಮಾಹಿತಿ

**ಧಾರವಾಡ:** ರಾಜ್ಯ ಚುನಾವಣಾ ಆಯೋಗದ ಆದೇಶದನ್ವಯ ಹಾಗೂ 1993 ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಉಪಬಂಧಗಳ ಮೇರೆಗೆ ಧಾರವಾಡ ಜಿಲ್ಲೆಯ ಹತ್ತು ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ, ಖಾಲಿ ಇರುವ ಗ್ರಾಮ ಪಂಚಾಯತಿ ಸದಸ್ಯ ಸ್ಥಾನಗಳಿಗೆ ನವೆಂಬರ 23 ರಂದು ಉಪ ಚುನಾವಣೆಯನ್ನು ಜರುಗಿಸಲು ಇಂದು (ನ.6) ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ್ದಾರೆ.

**ಖಾಲಿ ಸ್ಥಾನಗಳ ವಿವರ:** ಧಾರವಾಡ ತಾಲೂಕಿನ ಬೇಲೂರ ಗ್ರಾಮಪಂಚಾಯತಿಯ ಬೇಲೂರ ಕ್ಷೇತ್ರದ ಒಂದು (ಸಾಮಾನ್ಯ-1) ಖಾಲಿ ಸ್ಥಾನ ಹಾಗೂ ಮಾರಡಗಿ ಗ್ರಾಮಪಂಚಾಯತಿಯ ಸೋಮಾಪೂರ ಕ್ಷೇತ್ರದ ಒಂದು (ಹಿಂದುಳಿದ 'ಅ' ಪ್ರವರ್ಗ) ಖಾಲಿ ಸ್ಥಾನ ಮತ್ತು ನವಲಗುಂದ ತಾಲೂಕಿನ ಯಮನೂರ ಗ್ರಾಮಪಂಚಾಯತಿಯ ಆರೇಕುರಹಟ್ಟಿ 1ನೇ ಕ್ಷೇತ್ರದ (ಸಾಮಾನ್ಯ ಮಹಿಳೆ-1) ಮತ್ತು (ಸಾಮಾನ್ಯ-1) ಒಟ್ಟು 2 ಖಾಲಿ ಸ್ಥಾನ, ಆರೇಕುರಹಟ್ಟಿ 2ನೇ ಕ್ಷೇತ್ರದ (ಅನುಸೂಚಿತ ಜಾತಿ ಮಹಿಳೆ-1) ಮತ್ತು (ಹಿಂದುಳಿದ 'ಅ' ಪ್ರವರ್ಗ) ಒಟ್ಟು 2 ಖಾಲಿ ಸ್ಥಾನ, ಆರೇಕುರಹಟ್ಟಿ 3 ನೇ ಕ್ಷೇತ್ರದ (ಹಿಂದುಳಿದ 'ಬ' ಪ್ರವರ್ಗ ಮಹಿಳೆ, ಹಿಂದುಳಿದ 'ಅ' ಪ್ರವರ್ಗ, ಸಾಮಾನ್ಯ ಮಹಿಳೆ ಹಾಗೂ ಸಾಮಾನ್ಯ) ಒಟ್ಟು 4 ಖಾಲಿ ಸ್ಥಾನಗಳಿಗೆ ಉಪ ಚುನಾವಣೆ ಜರುಗಲಿದೆ.

ಕಲಘಟಗಿ ತಾಲೂಕಿನ ಮುತ್ತಗಿ ಗ್ರಾಮಪಂಚಾಯತಿಯ ಮುತ್ತಗಿ ಕ್ಷೇತ್ರದ ಒಂದು (ಅನುಸೂಚಿತ ಜಾತಿ) ಖಾಲಿ ಸ್ಥಾನ ಹಾಗೂ ಭೋಗೇನಾಗರಕೊಪ್ಪ ಗ್ರಾಮಪಂಚಾಯತಿಯ ಬಗಡಗೇರಿ ಕ್ಷೇತ್ರದ ಒಂದು (ಸಾಮಾನ್ಯ) ಖಾಲಿ ಸ್ಥಾನ ಮತ್ತು ಸೂರಶೆಟ್ಟಿಕೊಪ್ಪ ಗ್ರಾಮಪಂಚಾಯತಿಯ



ಸೂರಶೆಟ್ಟಿಕೊಪ್ಪ 2 ನೇ ಕ್ಷೇತ್ರಕ್ಕೆ ಒಂದು (ಸಾಮಾನ್ಯ) ಖಾಲಿ ಸ್ಥಾನ, ಕುಂದಗೋಳ ತಾಲೂಕಿನ ಸಂಶಿ ಗ್ರಾಮಪಂಚಾಯತಿಯ ಸಂಶಿ 3ನೇ ಕ್ಷೇತ್ರಕ್ಕೆ ಒಂದು (ಹಿಂದುಳಿದ 'ಅ' ಪ್ರವರ್ಗ ಮಹಿಳೆ) ಖಾಲಿ ಸ್ಥಾನ ಹಾಗೂ ಬರದ್ವಾಡ ಗ್ರಾಮಪಂಚಾಯತಿಯ ಕೊಡ್ಲಿವಾಡ ಕ್ಷೇತ್ರದ ಒಂದು (ಸಾಮಾನ್ಯ) ಖಾಲಿ ಸ್ಥಾನ, ಅಣ್ಣಿಗೇರಿ ತಾಲೂಕಿನ ನಲವಡಿ ಗ್ರಾಮಪಂಚಾಯತಿಯ ನಲವಡಿ 2ನೇ ಕ್ಷೇತ್ರಕ್ಕೆ ಒಂದು (ಸಾಮಾನ್ಯ) ಖಾಲಿ ಸ್ಥಾನ ಹಾಗೂ ಅಳ್ನಾವರ ತಾಲೂಕಿನ ಹೊನ್ನಾಪೂರ ಗ್ರಾಮಪಂಚಾಯತಿಯ ಕಂಬಾರಗಣವಿ 2ನೇ ಕ್ಷೇತ್ರದ ಒಂದು (ಹಿಂದುಳಿದ 'ಅ' ಪ್ರವರ್ಗ ಮಹಿಳೆ) ಖಾಲಿ ಸ್ಥಾನಗಳಿಗೆ ಉಪ ಚುನಾವಣೆ ಜರುಗಲಿದೆ.

ಉಪ ಚುನಾವಣೆ ವೇಳಾಪಟ್ಟಿ: ಧಾರವಾಡ ಜಿಲ್ಲೆಯ ವಿವಿಧ ಗ್ರಾಮಪಂಚಾಯತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ, ಖಾಲಿ ಇರುವ ಗ್ರಾಮ ಪಂಚಾಯತಿಗಳ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆಯನ್ನು ಜರುಗಿಸಲು ನವೆಂಬರ 6, 2024 ರಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪ್ರಪತ್ರ-2 ರಲ್ಲಿ ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗಿದೆ.

ನವೆಂಬರ 6 ರಿಂದ ನವೆಂಬರ 12 ರ ಬೆಳಿಗ್ಗೆ 11 ಗಂಟೆಯಿಂದ ಮದ್ಯಾಹ್ನ 3 ಗಂಟೆಯವರೆಗೆ (ಸಾರ್ವತ್ರಿಕ ರಜಾದಿನಗಳನ್ನು ಹೊರತುಪಡಿಸಿ) ನಾಮಪತ್ರಗಳನ್ನು ಸಲ್ಲಿಸಬಹುದು. ಮತ್ತು ನ.9,ರಂದು ಎರಡನೇ ಶನಿವಾರ ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆಯಡಿಯಲ್ಲಿ ಘೋಷಿಸಲ್ಪಟ್ಟ ಸಾರ್ವತ್ರಿಕ ರಜಾ ದಿನವಾಗಿರುವುದರಿಂದ ಸದರಿ ದಿನದಂದು ಯಾವುದೇ ನಾಮಪತ್ರಗಳನ್ನು ಸ್ವೀಕ-ರಿಸಲಾಗುವುದಿಲ್ಲ.

ನಾಮಪತ್ರ ಸಲ್ಲಿಸಲು ನ.12ರಂದು ಕೊನೆಯ ದಿನವಾಗಿರುತ್ತದೆ. ನಾಮಪತ್ರಗಳನ್ನು ನ.13ರಂದು ಪರಿಶೀಲಿಸಲಾಗುತ್ತದೆ. ಉಮೇದುವಾ-ರಿಕೆಗಳನ್ನು ಹಿಂತೆಗೆದುಕೊಳ್ಳಲು ನ.15 ಕೊನೆಯ ದಿನವಾಗಿರುತ್ತದೆ. ಮತದಾನ ಅವಶ್ಯವಿದ್ದರೆ ಮತದಾನ ನವೆಂಬರ 23 ರಂದು ಬೆಳಿಗ್ಗೆ 7 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೆ ನಡೆಸಲಾಗುತ್ತದೆ. ಮರು ಮತದಾನ ಅವಶ್ಯವಿದ್ದರೆ, ನ.25 ರಂದು ಬೆಳಿಗ್ಗೆ 7 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೆ ಮತದಾನ ನಡೆಸಲಾಗುತ್ತದೆ. ಮತಗಳ ಎಣಿಕೆಯನ್ನು ಆಯಾ ತಾಲೂಕು ಕೇಂದ್ರಗಳಲ್ಲಿ ನ.26 ರಂದು ಬೆಳಿಗ್ಗೆ 8 ಗಂಟೆಯಿಂದ ನಡೆಸಲಾಗುತ್ತದೆ. ಮತ್ತು ಚುನಾವಣಾ ಪ್ರಕ್ರಿಯೆಯನ್ನು ನ.26 ಮುಕ್ತಾಯಗೊಳಿಸಲಾಗುವುದು.

ಚುನಾವಣಾ ನೀತಿ ಸಂಹಿತೆ: ಚುನಾವಣಾ ನೀತಿ ಸಂಹಿತೆಯು ಉಪಚುನಾವಣೆ ಜರುಗಲಿರುವ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ನವೆಂಬರ 6, 2024 ರಿಂದ ನವೆಂಬರ 26, 2024 ರವರೆಗೆ ಜಾ-ರಿಯಲ್ಲಿರುತ್ತದೆ. ಉಪ ಚುನಾವಣೆ ಜರುಗಲಿರುವ ಗ್ರಾಮ ಪಂಚಾಯತಿಗಳ ಎಲ್ಲ ಮತದಾರರಲ್ಲಿ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘನೆ ಮಾಡಬಾರದೆಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿ.14ರಂದು ರಾಷ್ಟ್ರೀಯ ಲೋಕ ಆದಾಲತ್

**ಧಾರವಾಡ:** ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಗಳ ಆದೇಶದ ಮೇರೆಗೆ ಧಾರವಾಡ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಡಿಸೆಂಬರ್ 14, 2024 ರಂದು ಬೆಳಿಗ್ಗೆ 10 ಗಂಟೆಯಿಂದ 5 ಗಂಟೆಯವರೆಗೆ ರಾಷ್ಟ್ರೀಯ ಲೋಕ ಆದಾಲತ್ ಆಯೋಜಿಸಲಾಗುವುದು.

ಲೋಕ ಅದಾಲತ್‌ದಲ್ಲಿ ನ್ಯಾಯಾಲಯದಲ್ಲಿ ಬಾಕಿ ಇರುವ ರಾಜಿ ಆಗಬಹುದಾದ ಸಿವಿಲ್ ವ್ಯಾಜ್ಯ, ಮೋಟಾರ್ ವಾಹನ ಅಪಘಾತ ಪರಿಹಾರದ ಪ್ರಕರಣಗಳು, ಭೂ ಸ್ವಾಧೀನ ಪ್ರಕರಣಗಳು, ವಿದ್ಯುತ್ ಮಂಡಳಿ ಮುಂತಾದ ಸ್ಥಳೀಯ ಸಂಸ್ಥೆಗಳ ಪರ ಮತ್ತು ವಿರುದ್ಧ ದಾಖಲಾದ ಪ್ರಕರಣಗಳು, ಬ್ಯಾಂಕ್, ಸಹಕಾರಿ ಸಂಘ, ಖಾಸಗಿ ವ್ಯಕ್ತಿಗಳ ನಡುವಿನ ಚೆಕ್ ಅಮಾನ್ಯ, ಹಣ ವಸೂಲಾತಿ ಪ್ರಕರಣಗಳಿಗೆ ಸಂಬಂಧಿಸಿದ ವ್ಯಾಜ್ಯಗಳು,

ಜೀವನಾಂಶ, ವೈವಾಹಿಕ ಪ್ರಕರಣಗಳು (ವಿವಾಹ ವಿಚ್ಛೇದನ ಹೊರತುಪಡಿಸಿ), ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿನ ಪ್ರಕರಣಗಳು, ಕಾರ್ಮಿಕ ನಷ್ಟ ಪರಿಹಾರ ಪ್ರಕರಣಗಳು, ವಿದ್ಯುಚ್ಛಕ್ತಿ ಮತ್ತು ನೀರಿನ ಶುಲ್ಕ ಪಾವತಿ ಪ್ರಕರಣಗಳು, ಸಾರ್ವಜನಿಕ ಸೇವೆ ಮತ್ತು ನಿವೃತ್ತಿ ವೇತನಗಳಿಗೆ ಸಂಬಂಧಿಸಿದ ಪ್ರಕರಣಗಳು, ಕಂದಾಯ ಮತ್ತು ಅದಕ್ಕೆ ಸಂಬಂಧಿಸಿದ ಪ್ರಕರಣಗಳು, ಕಾನೂನಿನಲ್ಲಿ ರಾಜಿ ಆಗಬಹುದಾದ ಎಲ್ಲಾ ತರಹದ ಕ್ರಿಮಿನಲ್ ಪ್ರಕರಣಗಳನ್ನು ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಬಗೆಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸಿವಿಲ್ ವ್ಯಾಜ್ಯಗಳಲ್ಲಿ ಪಕ್ಷಗಾರರು ಲೋಕ್-ಅದಾಲತ್‌ನಲ್ಲಿ ರಾಜಿಯಾದರೆ ಪಕ್ಷಗಾರರು ಸರ್ಕಾರಕ್ಕೆ ಪಾವತಿಸಿರುವ ನ್ಯಾಯಾಲಯದ ಶುಲ್ಕವನ್ನು ವಾಪಸ್ಸು ಕೊಡಲು ಅವಕಾಶವಿದೆ. ಲೋಕ್‌ಅದಾಲತ್‌ನಲ್ಲಿ ಉಭಯ ಪಕ್ಷಗಾರರು ಪರಸ್ಪರ ಒಪ್ಪಿದಲ್ಲಿ ಮಾತ್ರ ರಾಜಿ ಮಾಡಿಕೊಳ್ಳಬಹುದು.ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರಾಗಿರುವ ನ್ಯಾಯಮೂರ್ತಿಗಳ ಆಶಯದಂತೆ ಲೋಕ್‌ಅದಾಲತ್ ಮುಖಾಂತರ ಪ್ರಕರಣಗಳನ್ನು ಇತ್ಯರ್ಥ-ಪಡಿಸಲು, ಸಾರ್ವಜನಿಕರು ವಿಶೇಷವಾಗಿ ಕಕ್ಷಿದಾರರು ಹೆಚ್ಚಿನ ಸಂಖ್ಯೆಯಲ್ಲಿ ಲೋಕ ಅದಾಲತ್‌ನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪರಶುರಾಮ ಎಫ್. ದೊಡ್ಡಮನಿ ಅವರು ತಿಳಿಸಿದ್ದಾರೆ.

# ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ



**ಧಾರವಾಡ:** ಧಾರವಾಡ ಜಿಲ್ಲಾ ಪಂಚಾಯತ ಆಡಳಿತಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಹಿರಿಯ ಐಎಎಸ್ ಅಧಿಕಾರಿ ದೀಪಾ ಚೋಳನ ಅವರು ಇಂದು (ನ.06) ಬೆಳಿಗ್ಗೆ ಡಿಸಿ ಕಚೇರಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ಯೋಜನೆ, ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆ ಜರುಗಿಸಿದರು.ಜಿಲ್ಲಾಧಿಕಾರಿ ದಿವ್ಯ ಪ್ರಭು, ಜಿಲ್ಲಾ ಪಂಚಾಯತ ಸಿಇಓ ಸ್ವರೂಪ ಟಿ.ಕೆ., ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಮತ್ತು ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ ವೇದಿಕೆಯಲ್ಲಿ ಇದ್ದರು.ಸಭೆಯಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ಮಾರಾಪುರದಲ್ಲಿ ನೂತನ ಪಿಕೆಪಿಎಸ್ ಸ್ಥಾಪನೆ

ಮಹಾಲಿಂಗಪುರ : ಸಮೀಪದ ಮಾರಾಪುರ ಗ್ರಾಮದಲ್ಲಿ ನೂತನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಸ್ಥಾಪನೆಯಾಯಿತು. ಬಾಗಲಕೋಟ ಜಿಲ್ಲೆಯ, ರಬಕವಿ ಬನಹಟ್ಟಿ ತಾಲೂಕಿನ ಕೊನೆಯ ಹಳ್ಳಿಯಾದ ಮಾರಾಪುರ ಗ್ರಾಮ ಮದಭಂವಿ ಗ್ರಾಮದ ಪಂಚಾಯ್ತಿ ವ್ಯಾಪ್ತಿಯಲ್ಲಿದ್ದು, ರೈತರು ಹಣ-ಕಾಸಿನ ಸೌಲಭ್ಯಕ್ಕಾಗಿ ಬೇರೆ ಊರಿನ ಸಂಘ, ಸಂಸ್ಥೆಗಳನ್ನು ಅವಲಂಬಿಸಿದ್ದರು. ರೈತರ ಅಗತ್ಯ ಮನಗಂಡು ಸ್ವತಂತ್ರ ಪಿಕೆಪಿಎಸ್ ಸ್ಥಾಪಿಸಿದ್ದಾರೆ. ಇತ್ತೀಚೆಗೆ ನೂತನ ಪಿಕೆಪಿ-ಎಸ್‌ಗೆ ಆಡಳಿತ ಮಂಡಳಿ ಚುನಾವಣೆ ನಡೆಸಲಾಯಿತು. ಸಂಸ್ಥಾಪಕ ಅಧ್ಯಕ್ಷರಾಗಿ ಮಹಾದೇವ ಭೀಮಪ್ಪ ಮಾರಾಪುರ (ಮೇಟಿ), ಉಪಾಧ್ಯಕ್ಷರಾಗಿ ರಮೇಶ ವಿಠ್ಠಲ ಬೀಸನಕೊಪ್ಪ, ನಿರ್ದೇಶಕರಾಗಿ ಸತ್ಯಪ್ಪ ಮಾರುತಿ ಧರ್ಮಟ್ಟಿ, ಪ್ರಭು ಹನಮಂತ ತಂಬೂರಿ, ಸಿದ್ದಪ್ಪ ಬಸವಣ್ಣೆಪ್ಪ ಮೇಟಿ, ಬಾದಶಾ ಅಪ್ಪಾಸಾಬ ನದಾಫ, ಮಹಾದೇವ ನಾಗಪ್ಪ ಜಮಖಂಡಿ, ಶಾಂತಾ ವೆಂಕಪ್ಪ ಕೇದಾರಿ, ಪ್ರಭಾವತಿ ಮಹಾದೇವ ಮಾರಾಪೂರ, ಲಕ್ಷ್ಮಣ ಬಸಪ್ಪ ಮೇತ್ರಿ, ಸಿದ್ದಪ್ಪ ರಾಮಪ್ಪ ಕೊಣ್ಣೂರ ಆಯ್ಕೆಯಾಗಿದ್ದಾರೆ ಎಂದು ರಿಟರ್ನಿಂಗ್ ಆಫೀಸರ್ ಎಸ್.ಬಿ.ಚಿನಗುಂಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಕಿಸಾನ್ ಮಾಲ್ ಸ್ಥಾಪಿಸಲು ಅರ್ಜಿ

ಬಾಗಲಕೋಟೆ: ನವೆಂಬರ 06 (ಕರ್ನಾಟಕ ವಾರ್ತೆ) : ಪ್ರಸಕ್ತ ಸಾಲಿನ ಸಮಗ್ರ ತೋಟಗಾ-ರಿಕೆ ಅಭಿವೃದ್ಧಿ ಯೋಜನೆಯಡಿ ಬಾಗಲಕೋಟೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಆವರಣದಲ್ಲಿ ಮೈಸೂರು ಕಿಸಾನ್ ಮಾಲ್ ಸ್ಥಾಪಿಸಲು ಅರ್ಹ ರೈತ ಉತ್ಪಾದಕರ ಸಂಸ್ಥೆಯಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನ ನವೆಂಬರ 30 ಇದ್ದು, ಹೆಚ್ಚಿನ ಮಾಹಿತಿಗಾಗಿ ದ್ಊಸ೦.9448999233ಗೆ ಸಂಪರ್ಕಿಸುವಂತೆ ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದ್ದಾರೆ.

# ತೆರವಾದ ಗ್ರಾಪಂ 27 ಸ್ಥಾನಗಳಿಗೆ ಉಪಚುನಾವಣೆ

**ಬಾಗಲಕೋಟೆ::** ಜಿಲ್ಲೆಯ ಕೆಲ ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾದ 27 ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸಲು ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಜಾನಕಿ ಕೆ.ಎಂ ಚುನಾವಣಾ ವೇಳಾ ಪಟ್ಟಿಯನ್ನು ಹೊರಡಿಸಿದ್ದಾರೆ.

ನಾಮಪತ್ರ ಸಲ್ಲಿಸಲು ಕೊನೆ ದಿನ ನವೆಂಬರ 12 ಆಗಿದ್ದು, ನಾಮಪತ್ರ ಪರಿಶೀಲನೆ 13 ರಂದು ನಡೆಯಲಿದೆ. ನಾಮಪತ್ರ ಹಿಂಪಡೆಯಲು 15 ಕೊನೆಯ ದಿನವಾಗಿದ್ದು, ಮತದಾನ 23 ರಂದು ಬೆಳಿಗ್ಗೆ 7 ರಿಂದ ಸಂಜೆ 5 ವರೆಗೆ ನಡೆಯಲಿದೆ. ಮರು ಮತದಾನ ಅವಶ್ಯವಿದ್ದಲ್ಲಿ 25 ರಂದು ನಡೆಸಲಾಗುತ್ತಿದ್ದು, ಮತ ಎಣಿಕೆ 26 ರಂದು ಬೆಳಿಗ್ಗೆ 8 ರಿಂದ ಆಯಾ ತಾಲೂಕಾ ಕೇಂದ್ರ ಸ್ಥಳಗಳಲ್ಲಿ ನಡೆಯಲಿದೆ.

ಮುಧೋಳ ತಾಲೂಕಿನ 2-ಭಂಟನೂರ (ಅನುಸೂಚಿತ ಜಾತಿ ಮಹಿಳೆ), 6-ಬುದ್ನಿ ಕೆಡಿ (ಹಿಂದುಳಿದ ವರ್ಗ ಅ), ರಬಕವಿ ಬನಹಟ್ಟಿ ತಾಲೂಕಿನ 3-ಆಸಂಗಿ (ಅನುಸೂಚಿತ ಜಾತಿ), ಜಮಖಂಡಿ ತಾಲೂಕಿನ 2-ಗೋಠೆ (ಹಿಂದುಳಿದ ವರ್ಗ ಅ), 5-ಕೊಣ್ಣೂರ (ಸಾಮಾನ್ಯ), 3-ಕುಂಬಾರಹಳ್ಳ (ಹಿಂದುಳಿದ ವರ್ಗ ಅ), 5-ಕಲಹಳ್ಳಿ (ಅನುಸೂಚಿತ ಪಂಗಡ-ಮಹಿಳೆ), ಬಾಗಲಕೋಟೆ ತಾಲೂಕಿನ 3-ನೀರಲಕೇರಿ (ಸಾಮಾನ್ಯ), 5-ಅಚನೂರು (ಅನುಸೂಚಿತ ಪಂಗಡ-ಮಹಿಳೆ), 7-ಚೌಡಾಪೂರ (ಹಿಂದುಳಿದ ವರ್ಗ ಅ) 3-ಭಗವತಿ, 4-ಅಂಕಲಗಿ (ಸಾಮಾನ್ಯ).

ಹುನಗುಂದ ತಾಲೂಕಿನ 5-ಹೊನ್ನರಹಳ್ಳಿ (ಸಾಮಾನ್ಯ), 1-ಚಿತ್ತರಗಿ (ಹಿಂದುಳಿದ ವರ್ಗ ಅ), ಬಾದಾಮಿ ತಾಲೂಕಿನ 4-ಕುಟಕನಕೇರಿ (ಅನುಸೂಚಿತ ಜಾತಿ-ಮಹಿಳೆ) 4-ಕುಟಕನಕೇರಿ (ಅನುಸೂಚಿತ ಪಂಗಡ-ಮಹಿಳೆ), 4-ಕುಟಕನಕೇರಿ (ಸಾಮಾನ್ಯ), ಕುಟಕನಕೇರಿ (ಸಾಮಾನ್ಯ-ಮಹಿಳೆ), 5-ಕುಟಕನಕೇರಿ (ಅನುಸೂಚಿತ ಜಾತಿ), 5-ಕುಟಕನಕೇರಿ (ಹಿಂದುಳಿದ ವರ್ಗ ಆ-ಮಹಿಳೆ), 5-ಕುಟಕನಕೇರಿ (ಸಾಮಾನ್ಯ-ಮಹಿಳೆ), 1-ನೀಲಗುಂದ, 05-ಚೊಳಚಗುಡ್ಡ (ಸಾಮಾನ್ಯ), ಗುಳೇದಗುಡ್ಡ ತಾಲೂಕಿನ 5-ಪಾದನಕಟ್ಟಿ (ಅನುಸೂಚಿತ ಪಂಗಡ-ಮಹಿಳೆ), 3-ಚಿಮ್ಮಲಗಿ ಹಿಂದುಳಿದ ವರ್ಗ ಅ-ಮಹಿಳೆ) ಹಾಗೂ ಬೀಳಗಿ ತಾಲೂಕಿನ ಬಾಡಗಿ (ಸಾಮಾನ್ಯ-ಮಹಿಳೆ) ತಲಾ ಒಂದು ಸ್ಥಾನಗಳಿಗೆ ಉಪ ಚುನಾವಣೆ ನಡೆಯಲಿದೆ.

### ಕಾನೂನು ಪದವೀಧರರ ತರಬೇತಿ ಭತ್ಯೆಗೆ ಅರ್ಜಿ

ಬಾಗಲಕೋಟೆ: ನವೆಂಬರ 06 (ಕರ್ನಾಟಕ ವಾರ್ತೆ) : ಪ್ರಸಕ್ತ ಸಾಲಿಗೆ ಜಿಲ್ಲೆಯ ಆಸಕ್ತ ಅರ್ಹ ಮತೀಯ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇ-ರಿದ ಕಾನೂನು ಪದವೀಧರರು 4 ವರ್ಷಗಳ ಅವಧಿಗೆ ತರಬೇತಿ ಭತ್ಯೆ ನೀಡಲು ಅರ್ಹ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನಿಸಲಾಗಿದೆ.


ಅಭ್ಯರ್ಥಿಗಳು ಬಾಗಲಕೋಟೆಯ ಜಿಲ್ಲೆಯವರಾಗಿದ್ದು, 3 ಜನ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಅರ್ಜಿ ಸಲ್ಲಿಸುವ ಕೊನೆ ದಿನಕ್ಕೆ 30 ವರ್ಷ ಮೀರಿರಬಾರದು. ಬಾರ ಕೌನ್ಸಿಲ್‌ನಲ್ಲಿ ಹೆಸರು ನೋಂದಾಯಿಸಿರಬೇಕು. ತರಬೇತಿಗೆ ಅವಧಿಯಲ್ಲಿ ಮಾಹೆಯಾನ 5 ಸಾವಿರ ರೂ. ಗಳ ತರಬೇತಿ ಭತ್ಯೆ ನೀಡಲಾಗುತ್ತದೆ. ಸಂದರ್ಶನ ಮೂಲಕ ಆಯ್ಕೆ ಮಾಡಲಾಗುತ್ತಿದೆ. ಆಸಕ್ತರು ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ನವೆಂಬರ 15 ರೊಳಗಾಗಿ ಸಲ್ಲಿಸಬೇಕು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂಸಂ.08354-200044ಗೆ ಸಂಪರ್ಕಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶಿವಾನಂದ ಪಟ್ಟಣಶೆಟ್ಟಿ ತಿಳಿಸಿದ್ದಾರೆ.

# ಹೆಣ್ಣು ಹೊನ್ನು ಮಣ್ಣು ಹಿಂದೆ ಬಿದ್ದರೆ ಜೀವನ ಸರ್ವನಾಶ

## ಧರಿದೇವರ ಹಾಗೂ ಜಕ್ಕಮ್ಮ ದೇವರ ಜಾತ್ರಾಮಹೋತ್ಸವದಲ್ಲಿ ಅಡವಿಸಿದ್ಧರಾಮ ಮಹಾಸ್ವಾಮಿಗಳ ನುಡಿ

**ಹಳ್ಳೂರ:** ಅತೀ ಆಸೆ ಜೀವಕ್ಕೆ ಅಪಾಯಕಾರಿ ಹೆಣ್ಣು ಹೊನ್ನು ಮಣ್ಣು ಆಸೆಗೆ ಬಿದ್ದು ಕೋಟ್ಯಾನ್ ಕೋಟಿ ಜನ ಸಾವನ್ನಪ್ಪಿದ್ದಾರೆ.ಆಸೆ ಆಮಿಷಕ್ಕೆ ಒಳಗಾಗಿ ಹೀನ ಕೃತ್ಯ ಮಾಡಿ ಪಾಪಕ್ಕೆ ಗುರಿಯಾಗಬಾರದು. ಮೃತ್ಯ ಯಾರನ್ನು ಬಿಡೋದಿಲ್ಲ ಶಿವನ ಬಕ್ತ ರಾವನ ಹೆಣ್ಣಿನ ಆಸೆಗೆ ಬಿದ್ದು ಕೆಟ್ಟ. ದೇವರಲ್ಲಿ ಅಪಾರವಾದ ನಂಬಿಕೆ ಇಟ್ಟು ನಾಮಸ್ಮರಣೆ ಮಾಡುತ್ತಾ ಇದ್ದರೆ ಕರ್ಮ ನಾಶವಾಗಿ ಪುಣ್ಯ ಪ್ರಾಪ್ತಿಯಾಗುವುದು.ದುಶ್ಚಟಗಳಿಗೆ ಬಲಿಯಾಗಿ ಜೀವನಹಳ್ಳಿ ಹಾಳು ಮಾಡಿಕೊಳ್ಳಬೇಡಿ ಎಂದು ಅಡವಿಸಿದ್ಧರಾಮ ಮಹಾಸ್ವಾಮಿಗಳು ಹೇಳಿದರು.

ಅವರು ಗ್ರಾಮದ ಬಸವ ನಗರದ ಧರಿದೇವರ ಹಾಗೂ ಜಕ್ಕಮ್ಮ ದೇವರ ಜಾತ್ರಾಮಹೋತ್ಸವದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ಕೆಟ್ಟ ಚಟಗಳಿಗೆ ಅನಾವಶ್ಯಕವಾಗಿ ಖರ್ಚು ಮಾಡುವ ಬದಲು ದೇವರ ಜಾತ್ರೆ ದಾನ ಧರ್ಮಕ್ಕೆ ಖರ್ಚು ಮಾಡಿದರೆ ದರಿದೇವರು ಸಕಲ ಸೌಭಾಗ್ಯ ನೀಡುತ್ತಾನೆ ಎಂದು ಹೇಳಿದರು.



ಆಲಗೂರ ಶಾಂತಮೂರ್ತಿ ಲಕ್ಷ್ಮಣ ಮುತ್ತ್ಯಾ ಸಾನಿಧ್ಯ ವಹಿಸಿ ಮಾತನಾಡಿ ಜೀವನದಲ್ಲಿ ಪ್ರತಿಯೊಬ್ಬರೂ ತಪ್ಪು ತಡೆ ಮಾಡುವುದು ಸಹಜ ತಿದ್ದಿ ಬುದ್ಧಿ ಹೇಳಿ ಕ್ಷಮಿಸುವ ಗುಣ ಹೊಂದಿರಬೇಕು. ದರೀದೇವರು ಪವಾಡ ಪುರುಷರು. ಜೀವನದಲ್ಲಿ ಗೆಲುವು ಸಾಧಿಸಬೇಕಾದರೆ ಗುರುವಿನ ಆಶೀರ್ವಾದ ಬೇಕು. ಹಿಂಸಾ ಮೋಸ ವಂಚನೆ ಮಾಡುವುದು ಮಹಾಪಾಪ. ಸ್ತ್ರೀಯರು ಹಿಂದೂ ಧರ್ಮದ ಸಂಸ್ಕೃತಿಯನ್ನು ಉಳಿಸಿ ಬೆಳೆಸಿ ಪತಿವ್ರತೆ ಪಾಲಿಸಬೇಕು. ಭಕ್ತಿಯಿಂದ ಪೂಜೆ ಜಾತ್ರೆ ಮಾಡಿದಾಗ ಮಾತ್ರ ದೇವರಿಗೆ ಸಲ್ಲುತ್ತದೆಂದು ಹೇಳಿದರು.

ಮಹಾದೇವ ನುಚ್ಚುಂಡಿ.ಮುತ್ತಪ್ಪ ನುಚ್ಚುಂಡಿ. ಸುಭಾಸ ಬ್ಯಾಳಿ. ಅಶೋಕ ನುಚ್ಚುಂಡಿ.ಬಸಪ್ಪ ಮಾಳಿ. ಭೀಮಪ್ಪ ನುಚ್ಚುಂಡಿ. ಪತ್ರೆಪ್ಪ ಬ್ಯಾಳಿ. ರವೀಂದ್ರ ನುಚ್ಚುಂಡಿ. ರಾಜು ಕಲ್ಮಡಿ. ಅಶೋಕ ಅಳಗೋಡಿ. ಅರ್ಜುನ ಬೋಳನ್ನವರ. ಪ್ರಕಾಶ ನುಚ್ಚುಂಡಿ. ಮಹಾಲಿಂಗ ನುಚ್ಚುಂಡಿ. ಈರಪ್ಪ ನುಚ್ಚುಂಡಿ ಸೇ-ರಿದಂತೆ ಅನೇಕರಿದ್ದರು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಮುರಿಗೆಪ್ಪ ಮಾಲಗಾರ ಸ್ವಾಗತಿಸಿ, ನಿರೂಪಿಸಿ. ಬಸವರಾಜ ಬೋಳನ್ನವರ ವಂದಿಸಿದರು.

# ಲಂಚ ಪ್ರಕರಣ ಆರೋಪಿಗಳಿಗೆ ಎರಡು ವರ್ಷ ಕಠಿಣ ಶಿಕ್ಷೆ

ಬೆಳಗಾವಿ : ಕಟಕಭಾವಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾದ ಅಶೋಕ ಶ್ರೀಮಂದರ ಚೌಗುಲೆ ಮತ್ತು ಕ್ಲರ್ಕ್ ಸಂಗಪ್ಪ ಪರಪ್ಪ ದಾವಣಿ ಇವರಿಬ್ಬರೂ ಲಂಚ ಪಡೆಯುತ್ತಿರುವ ವೇಳೆ ಟ್ರ್ಯಾಪ್ ಮಾಡಲಾಗಿತ್ತು.

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಕಟಕಭಾವಿ ಗ್ರಾಮದ ಅಮೀನಾ ಮಲಿಕಸಾಬ ಅರಭಾವಿ ಅವರ ಗಂಡ ಮಲೀಕಸಾಬ ಅರಭಾವಿ ಅವರ ಹೆಸರಿನಲ್ಲಿದ್ದ ಮನೆಯನ್ನು ಅಮೀನಾ ಹೆಸ–ರಿನಲ್ಲಿ ಆಸ್ತಿ ರಜಿಸ್ಟರನಲ್ಲಿ ದಾಖಲು ಮಾಡಿಕೊಡಲು ಕಟಕಭಾವಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಅಶೋಕ ಶ್ರೀಮಂದರ ಚೌಗುಲೆ ಮತ್ತು ಕ್ಲರ್ಕ್ ಸಂಗಪ್ಪ ಪರಪ್ಪ ದಾವಣಿ ಇವರಿಬ್ಬರೂ ಒಟ್ಟು ರೂ 700 ಲಂಚವನ್ನು ಪಡೆದುಕೊಳ್ಳುವಾಗ ದಿನಾಂಕ: 24/07/2006 ರಂದು ಟ್ರ್ಯಾಪ್ ಮಾಡಲಾಗಿತ್ತು.

ಸದರಿ ಪ್ರಕರಣದ ವಿಚಾರಣೆಯನ್ನು 4 ನೇ ಅಧಿಕ ಸತ್ರ ಮತ್ತು ಲಂಚ ನಿರ್ಮೂಲನಾ ಕಾಯ್ದೆಯಡಿಯ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಧೀಶರಾದ ರಾಜೇಂದ್ರ ಎಮ್.ಬದಾಮಿಕರ ಇವರು ಆರೋಪಿತದಾರನ್ನು ತಪ್ಪಿತಸ್ಥರೆಂದು ಪರಿಗಣಿಸಿ ಕ. ಲಂ 7 ಮತ್ತು 13(1)ಡಿ ಸಹ ಕಲಂ 13(2) ಅಪಾದನೆಗಳಿಗೆ ತಲಾ ಎರಡು ವರ್ಷ ಕಠಿಣ ಶಿಕ್ಷೆ ಮತ್ತು 5000 ದಂಡ ವಿಧಿಸಿ ಆದೇಶವನ್ನು ಮಾಡಿರುತ್ತಾರೆ. ಸದರಿ ಪ್ರಕರಣದ ತನಿಖೆಯನ್ನು ಲೋಕಾಯುಕ್ತ ಠಾಣೆ ಪೊಲೀಸ ಇನ್ಸಪೆಕ್ಟರರಾದ ಜಿ.ಸಿ ರವಿಕುಮಾರವರು ಮಾಡಿರುತ್ತಾರೆ. ಸರಕಾರದ ಪರ ವಿಶೇಷ ಸರಕಾರಿ ಅಭಿಯೋಜ–ಕರಾದ ವಿಜಯಕುಮಾರ್ ಗುಂಜಾಳರವರು ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದರು. 4ನೇ ಜಿಲ್ಲಾ ಹೆಚ್ಚುವರಿ & ಸತ್ರ ನ್ಯಾಯಾಲಯ ಬೆಳಗಾವಿ ರವರು 07/11/2024 ರಂದು ಸದರಿ ಆರೋಪಿತ ಅಧಿಕಾರಿಯ ವಿರುದ್ಧ ಕನ್ವಿಕ್ಷನ್ ವಾರೆಂಟ್ ಹೊರಡಿಸಿರುತ್ತದೆ ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ತಹಶೀಲ್ದಾರ ಕಚೇರಿ ಎದುರು ಕುಂಟೋಜಿ ಗ್ರಾಮದ ರೈತರಿಂದ ಪ್ರತಿಭಟನೆ




ಮುದ್ದೇಬಿಹಾಳ: ಪಹಣಿಯ 11ನೇ ಕಾಲಂನಲ್ಲಿ ವಕ್ಫ್ ಆಸ್ತಿ, ಕರ್ನಾಟಕ ಸರ್ಕಾರ ಎಂದು ನಮೂದಲಾಗಿರುವ ಪದಗಳನ್ನು ತೆಗೆದು ಹಾಕುವಂತೆ ಆಗ್ರಹಿಸಿ ಕುಂಟೋಜಿ ಗ್ರಾಮದ ರೈತರು ಇಲ್ಲಿನ ತಹಶೀಲ್ದಾರ್ ಕಚೇರಿ ಎದುರು ಗುರುವಾರದಿಂದ ಅನಿರ್ಧಿಷ್ಠಾವಧಿಯ ಅಹೋರಾತ್ರಿ ಧರಣಿ ಸತ್ಯಾಗ್ರಹ ಪ್ರಾರಂಭಿಸಿದರು.

ನ.4ರಂದು ಬೃಹತ್ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ, ತಹಶೀಲ್ದಾರ್‌ಗೆ ಗಡುವು ನೀಡಿದ್ದರೂ ಪಹಣಿಯಲ್ಲಿ ಬದಲಾವಣೆ ಆಗದ ಕಾರಣ ಅಂದು ನೀಡಿದ್ದ ಎಚ್ಚ–ರಿಕೆಯಂತೆ ಇಂದು ಅಹೋರಾತ್ರಿ ಧರಣಿಗೆ ಚಾಲನೆ ನೀಡಿದರು. ರೈತರಿಗೆ ಮಾಹಿತಿ ನೀಡದೆ ಪಹಣಿಯ 11ನೇ ಕಾಲಂನಲ್ಲಿ ವಕ್ಫ್ ಬೋರ್ಡ್, ಕರ್ನಾಟಕ ಸರ್ಕಾರ ಹೆಸರು ನಮೂದಿಸಿದ್ದು ರೈತರಿಗೆ ಆತಂಕ ತಂದೊಡ್ಡಿದ್ದು ಸಮಸ್ಯೆಗೆ ಪರಿಹಾರ ಸಿಗುವವರೆಗೂ ಧರಣಿ ಕೈಬಿಡದಿರಲು ತೀರ್ಮಾನಿಸಿದರು.

ಕುಂಟೋಜಿ, ಬಿದರಕುಂದಿ ಗ್ರಾಮ ವ್ಯಾಪ್ತಿಯ 29 ರೈತರ ಸರ್ವೆ ನಂಬರ್‌ಗಳಾದ 277, 278, 279, 289, 290, 300, 301, 302, 303, 304, 305, 311, 312, 313, 466/1 ರಲ್ಲಿರುವ ಅಂ–ದಾಜು 380 ಎಕರೆ ಜಮೀನು ಸ್ವಂತ ಮಾಲ್ಕಿ ಕಬ್ಜಾ ವಹಿವಾಟಿನ ಜಮೀನುಗಳಾಗಿವೆ. ಇವುಗಳಿಗೆ ಸೇ–ರಿದ ಪಹಣಿಯಲ್ಲಿ ವಕ್ಫ್ ಆಸ್ತಿ, ಕರ್ನಾಟಕ ಸರ್ಕಾರ ಎಂದು 2019ರ ಜನೇವರಿಯಲ್ಲಿ ಸೇರಿಸಲಾಗಿದೆ.

4–3–1961ರಂದು ಬಾಗಲಕೋಟೆಯ ಎಸಿಯವರ ಸೂಚನೆ ಮೇರೆಗೆ 6 ಪಟ್ಟು ರಕಂ ತುಂಬಿ ರಿಗ್ರಾ ?ಯಂಟ್ ಮಾಡಿಕೊಂಡ ನಂತರ ಸರ್ಕಾರ ಪದವನ್ನು ವಜಾಗೊಳಿಸಿಕೊಳ್ಳಲಾಗಿದೆ. ಹೀಗಿದ್ದರೂ ಏಕಾಏಕಿ ವಕ್ಫ್ ಆಸ್ತಿ, ಕರ್ನಾಟಕ ಸರ್ಕಾರ ಎಂದು ನಮೂದಿಸಿರುವುದು ಷಡ್ಯಂತ್ರವಲ್ಲದೆ ಬೇರೇನೂ ಅಲ್ಲ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಬಾಧಿತ ರೈತರು ಮತ್ತು ರೈತ ಸಂಘಟನೆಗಳ ಪದಾಧಿಕಾರಿಗಳು, ಸದಸ್ಯರಾದ ಬಸಯ್ಯ ಮಠ, ನಯಿಂಪಾಷಾ ಇನಾಮದಾರ, ಶಾಂತಗೌಡ ನೆಲಗದ್ದಿ, ಬಸನಗೌಡ ಗೋನಾಳ, ಶಿವನಗೌಡ ಕರಕಳ್ಳಿ, ಸಂಗನಗೌಡ ಸೌದಿ, ಬಸವಂತ್ರಾಯ ಬಿರಾದಾರ, ಬಾಳಪ್ಪಗೌಡ ನಿಂಗದಳ್ಳಿ, ಸಿದ್ರಾಮಪ್ಪ ಕೋಳೂರ,ಸಂಗಮೇಶ ಕುಂಬಾರ,ಯಲ್ಲಪ್ಪ ಯರಝುರಿ ಸೇರಿದಂತೆ ಉಪಸ್ಥಿತರಿದ್ದರು.

# ಭಾವಿಯಲ್ಲಿ ಬಿದ್ದ ಎಮ್ಮೆ ರಕ್ಷಿಸಿದ ಅಗ್ನಿಶಾಮಕ ಸಿಬ್ಬಂದಿ



ಬಸವನಬಾಗೇವಾಡಿ, : ತಾಲೂಕಿನ ನರಸಲಗಿ ಗ್ರಾಮದ ಶ್ರೀಶೈಲಗೌಡ ಹೊಸಳ್ಳಿ ಅವರ ತೋಟದ ಭಾವಿಯಲ್ಲಿ ಬುಧವಾರ ಆಕಸ್ಮಿಕವಾಗಿ ಬಿದ್ದ ಎಮ್ಮೆಯನ್ನು ಸ್ಥಳೀಯ ಅಗ್ನಿ ಶಾಮಕ ಠಾಣೆಯ ಸಿಬ್ಬಂದಿ ತೆರಳಿ ಕಾರ್ಯಾಚರಣೆ ನಡೆಸಿ ಸುರಕ್ಷಿತವಾಗಿ ಎಮ್ಮೆಯನ್ನು ರಕ್ಷಿಸಿದರು. ಈ ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಠಾಣಾಧಿಕಾರಿ ಸಂಗಮೇಶ ಶಿವಪೂಜಿ, ಸಿಬ್ಬಂದಿಗಳಾದ ಬಸಪ್ಪ ಜಾಲಗೇರಿ, ಉಮೇಶ ಹೂಗಾರ, ಚಂದ್ರಗುಪ್ತ ಅಂಬಳನೂರ ಶ್ರೀಕಾಂತ ಅಂಕಲಗಿ, ಯಮನಪ್ಪ ಹೊಲೇರ ಇದ್ದರು.

# ವಕ್ಫ್ ಹೋರಾಟ: ಉಕ್ಕಲಿ ಗ್ರಾಮದ ರೈತರಿಂದ ರೊಟ್ಟಿ ಬುತ್ತಿ ನೀಡುವ ಮೂಲಕ ಧರಣಿಗೆ ಬೆಂಬಲ



ಬಸವನಬಾಗೇವಾಡಿ,: ತಾಲೂಕಿನ ಉಕ್ಕಲಿ ಗ್ರಾಮದ ರೈತ ಬಾಂಧವರು ವಿಜಯಪುರ ನಗರದಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ನೇತೃತ್ವದಲ್ಲಿ ನಡೆಯುತ್ತಿರುವ ವಕ್ಫ್ ಹಟಾವೋ ದೇಶ ಬಚಾವೋ, ಮಾದಕ ವಕ್ಫ್‌ಕಾಯ್ದೆ ರದ್ದುಗೊಳಿಸಬೇಕೆಂದು ಆಗ್ರಹಿಸಿ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಬುಧವಾರ ರೊಟ್ಟಿ ಬುತ್ತಿ ನೀಡುವ ಮೂಲಕ ಬೆಂಬಲ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ರೈತರಾದ ಅಶೋಕ ಹಾವಿನಾಳ, ಬಾಬುಗೌಡ ಬಿರಾದಾರ, ಅಶೋಕ ಮಸಳಿ, ಜೀವಪ್ಪ ಬಮನಳ್ಳಿ, ಮಲ್ಲೇಸಿ ಜುಮನಾಲ, ಬಸು ಬಡಿಗೇರ, ಶಂಕ್ರಯ್ಯ ಬಬಲೇಶ್ವರ, ಪ್ರಶಾಂತ ಬಡಿಗೇರ, ರಾಹುಲ ಕಲಗೊಂಡ, ಚಿದು ಬೆಲ್ಲದ, ಗೊಲ್ಲಾಳ ನಾದ, ಜಾವು ಮಸಳಿ, ಜಕ್ಕಪ್ಪ ನಾದ, ಮೋಹನ ಬಡಿಗೇರ, ಅಶೋಕ ಹಡಪದ, ಗಂಗಾಧರ ಬಡಿಗೇರ, ಮಹಾಂತೇಶ ಕಂಬಿ, ರಾಜು ಮಸಳಿ, ಪ್ರಜ್ವಲ ಹಂಡಿ, ಜಗು ಬಸರಿಗಿಡದ, ಭೀಮು ಹಡಪದ ಇತರರು ಇದ್ದರು.

## ನೇಕಾರ ಸಂಘದ ಕಚೇರಿ ಉದ್ಘಾಟನೆ

# ನೇಕಾರರ ಬದುಕಿಗೆ ಸೇವಾ ಸಂಘ ಬೆಳಕಾಗಲಿ : ಗುರುಸಿದ್ದೇಶ್ವರ ಶ್ರೀಗಳು

ಮಹಾಲಿಂಗಪುರ: ನೇಕಾರರ ಬೇಡಿಕೆಗಳ ಬಗ್ಗೆ ಸರಕಾರದ ಗಮನ ಸೆಳೆದು ಅವರ ಬದುಕಿಗೆ ಬೆಳಕಾಗುವಲ್ಲಿ ರಾಜ್ಯ ನೇಕಾರ ಸೇವಾ ಸಂಘದ ಪಾತ್ರ ದೊಡ್ಡದು ಎಂದು ರಬಕವಿಯ ಬ್ರಹ್ಮಾನಂದ ಮಠದ ಗುರುಸಿದ್ದೇಶ್ವರ ಸ್ವಾಮಿಜಿ ಹೇಳಿದರು.

ಸ್ಥಳೀಯ ಜಯಲಕ್ಷ್ಮೀ ನಗರದಲ್ಲಿ ನೇಕಾರ ಸಂಘದ ಕಚೇರಿ ಉದ್ಘಾಟಿಸಿ ಅವರು ಮಾತನಾಡಿ, ರಾಜ್ಯದ ಎಲ್ಲ ಜಿಲ್ಲೆ, ತಾಲೂಕುಗಳ ನೇಕಾರರಿಗೆ ಈ ಕಚೇರಿಯಿಂದ ಸೇವೆ ಸಿಗುವಂತಾಗಲಿ ಎಂದರು. ಚಿಮ್ಮಡ ವಿರಕ್ತಮಠದ ಪ್ರಭು ಸ್ವಾಮಿಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ರೈತ ಮತ್ತು ನೇಕಾರರು ಈ ರಾಜ್ಯದಲ್ಲಿ ಹೋರಾಟ ಮಾಡದೆ ಏನನ್ನೂ ಪಡೆಯದ ಪರಿಸ್ಥಿತಿ ಇದೆ. ಸರಕಾರಗಳು ನೇಕಾರ ಮತ್ತು ರೈತರ ಹೋರಾಟಗಳನ್ನು ಗೌರವಿಸಿ ಕುಂದು ಕೊರತೆ ನೀಗಿಸಬೇಕು. ನಮ್ಮದೇ ಬುತ್ತಿ, ನಮ್ಮದೇ ಬಸ್ ಚಾರ್ಜ್, ನಮ್ಮ ಹಕ್ಕುಗಳಿಗಾಗಿ ಹೋರಾಟ ಎನ್ನುವ ಧ್ಯೆಯೋದ್ದೇಶದಿಂದ ಕಾರ್ಯನಿರ್ವಹಿಸುತ್ತಿರುವ ಸಂಘದ ಕಾರ್ಯ ಶ್ಲಾಘನೀಯ ಎಂದರು.

ಜಿಪಂ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ, ಪುರಸಭೆ ಸದಸ್ಯರಾದ ರವಿ ಜವಳಗಿ, ಪಲ್ಲಾದ ಸಣ್ಣಕ್ಕಿ, ರಾಜು ಜಮಕೇರಿ, ಬಸವರಾಜ ಹಿಟ್ಟಿನಮಠ ನೇಕಾರ ಮುಖಂಡರಾದ ರಾಜೇಂದ್ರ ಮಿರ್ಜಿ, ಸೋಮು ಮರೆಗುದ್ದಿ



ಮಾತನಾಡಿದರು. ಕಚೇರಿ ನಿರ್ವಹಣೆಗೆ ಗದಗ–ಬೆಟಗೇರಿ ನೇಕಾರರು ಗಣಕಯಂತ್ರ ಹಾಗೂ ಮುದ್ರಣ ಯಂತ್ರ ಕೊಡಮಾಡಿದರು. ನಂತರ ನಡೆದ ಸಭೆಯಲ್ಲಿ ಡಿ.10 ರಂದು ಬೆಳಗಾವಿ ಚಲೋ ಹೋರಾಟ ನಡೆಸಲು ನಿರ್ಧ–ರಿಸಲಾಯಿತು.

ಪತ್ರಕರ್ತ ಮಹೇಶ ಮಣ್ಣಯ್ಯನವರಮಠ ಮತ್ತು ಮುಖಂಡರಾದ ಸಂಗಪ್ಪ ಊದಗಟ್ಟಿ, ಅರ್ಜುನ ಕುಂಬಾರ, ಲಕ್ಷ್ಮಣ ಡೋಣಿವಾಡಿ, ಓಂ ಬಾಗೇವಾಡಿ, ಭೀಮರಾವ್ ಖೋತ, ವಿರುಪಾಕ್ಷ ಕಾಗಿ, ರಾಘು ಬೆಳಗಲಿ, ರಮೇಶ ಹತ್ತಿಕಾಳ, ಬಸವರಾಜ ಕರಿ, ರಾಜು ದಡಿ, ಮಾಧುಸಾ ಮೆಹರವಾಡೆ ಸೇರಿ ರಬಕವಿ ಬನಹಟ್ಟಿ ದೋಣಿವಾಡಿ ಮಾಣಕಾಪುರ, ಗೋಕಾಕ, ಗದಗ–ಬೆಟಗೇರಿ, ಹೊಸೂರ, ರಾಂಪುರ, ಹುಲ್ಯಾಳದ ನೇಕಾರರು, ಸ್ಥಳೀಯ ನ್ಯಾಯವಾದಿಗಳು, ರೈತ ಸಂಘ ಕಾರ್ಮಿಕ ಸಂಘ ಹಿಂದು ಪರ ಸಂಘಟನೆಗಳು, ಕನ್ನಡ ಸಂಘ ಅಂಗವಿಕಲರ ಸಂಘದವರು ಭಾಗವಹಿಸಿದ್ದರು.

## ಇ-ಶ್ರಮ ಹಾಗೂ ವಲಸೆ ಕಾರ್ಮಿಕರ ಗಮನಕ್ಕೆ

ಬೆಳಗಾವಿ ಬೆಳಗಾವಿ ಜಿಲ್ಲೆಯಲ್ಲಿ ಕಾರ್ಮಿಕ ಇಲಾಕೆಯ ವ್ಯಾಪ್ತಿಯಲ್ಲಿ ನೋಂದಾಯಿಸಿಕೊಂಡ ಯು.ಎಎನ್ ಸಂಖ್ಯೆ ಪಡೆದಂತಹ ಕಾರ್ಮಿಕರು ಅಥವಾ ವಲಸೆ ಕಾರ್ಮಿಕರು ಆಹಾರ ಇಲಾಖೆಯಿಂದ ಆಧ್ಯತಾ (ಬಿಪಿಎಲ್) ಪಡಿತರ ಚೀಟಿಯನ್ನು ಪಡೆದುಕೊಳ್ಳಲು ಅವಕಾಶ ಕಲ್ಪಸಲಾಗಿದೆ.

ತಾಲೂಕುವಾರು ವಿವರ: ಇ–ಶ್ರಮ ಹಾಗೂ ವಲಸೆ ಕಾರ್ಮಿಕರು ಜಿಲ್ಲಾ ತಾಲೂಕು ವ್ಯಾಪ್ತಿಯಲ್ಲಿ ಬರುವ ಅಥಣಿ ಇ–ಶ್ರಮ ಕಾರ್ಮಿಕರ ಸಂಖ್ಯೆ (1066), ಬೈಲಹೊಂಗಲ (1010), ಬೆಳಗಾವಿ(ಅಪಕ್ಷೆ 1832), ಬೆಳಗಾವಿ (ಗ್ರಾಮೀಣ 1445), ಚಿಕ್ಕೋಡಿ (512), ಗೋಕಾಕ (1525), ಹುಕ್ಕೇರಿ (1291), ಕಾಗವಾಡ (122), ಖಾನಾಪೂರ (846), ಕಿತ್ತೂರ (405), ಮೂಡಲಗಿ (125), ನಿಪ್ಪಾಣಿ (1362), ರಾಮದುರ್ಗ (693), ರಾಯಬಾಗ (1007), ಸವದತ್ತಿ (67).

ಸದರಿ ಫಲಾನುಭವಿಗಳು ಕಾರ್ಮಿಕರ ಇಲಾಖೆಯಿಂದ ಯುನಿವರ್ಸಲ್ ಅಕೌಂಟ್ ನಂಬರ ಹೊಂದಿದ ಫಲಾನುಭವಿಗಳು ತುರ್ತಾಗಿ ತಮ್ಮ ಆಧಾರ್ ಕಾರ್ಡದೊಂದಿಗೆ ಆಯಾ ತಾಲೂಕಿನ ತಹಶೀಲ್ದಾರ ಕಾರ್ಯಾಲಯದಲ್ಲಿ ಅಥವಾ ಆಹಾರ ಶಾಖೆಗೆ ಹಾಗೂ ಬೆಳಗಾವಿ ನಗರ ಪ್ರದೇಶ ವ್ಯಾಪ್ತಿಯಲ್ಲಿರುವವರು ಸಹಾಯಕ ನಿರ್ದೇಶಕ ಕಚೇರಿ, ಅಪಕ್ಷೆ ಕಾರ್ಯಾಲಯಕ್ಕೆ ಬೇಟಿ ಕೊಟ್ಟು ಅರ್ಹತೆಯ ಅನುಗುಣವಾಗಿ ಬಿಪಿಎಲ್ ಪಡಿತರ ಚೀಟಿಯನ್ನು ಪಡೆದುಕೊಳಬಹುದು ಎಂದು ಬೆಳಗಾವಿ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಆರ್‌ಡಬ್ಲ್ಯೂ ಹುದ್ದೆಗೆ ಅರ್ಜಿ ಆಹ್ವಾನ

ಬೆಳಗಾವಿ : ಖಾನಾಪೂರ ತಾಲೂಕಿನ ವ್ಯಾಪ್ತಿಯ ನಾಗರಗಾಳಿ–01, ಹಿರೇಹಟ್ಟಿಹೊಳಿ–01 ಹಾಗೂ ಪಾರವಾಡ–01 ಗ್ರಾಮ ಪಂಚಾಯತಿಗಳಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ (ವಿ.ಆರ್.ಡಬ್ಲ್ಯೂ) ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಅರ್ಹ ವಿಕಲಚೇತನ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಇಲಾಖೆಯ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಮಾಸಿಕ 9.000 ಗೌರವ ಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಅರ್ಜಿದಾರರು ವಿಕಲಚೇತನರಿದ್ದು, ಆಯಾ ಗ್ರಾಮ ಪಂಚಾಯತಿಗಳ ವ್ಯಾಪ್ತಿಗೊಳಪಟ್ಟಿರಬೇಕು. ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಅಥವಾ ಅನುತ್ತೀರ್ಣರಾಗಿದ್ದು, ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ವಿಕಲಚೇತನ ಮಹಿಳಾ, ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳು ಹಾಗೂ ಇಲಾಖೆಯ ಯೋಜನೆಗಳ ಬಗ್ಗೆ ಜ್ಞಾನ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಕನಿಷ್ಠ 18 ವರ್ಷ ಗರಿಷ್ಠ 45 ವರ್ಷ ವಯೋಮಿತಿಯಲ್ಲಿರಬೇಕು.

ಆಸಕ್ತ ಅಭ್ಯರ್ಥಿಗಳು ಡಿ.07 ರ ಸಂಜೆ 5 ಗಂಟೆಯೊಳಗಾಗಿ ಖಾನಾಪೂರನ ತಾಲೂಕು ಪಂಚಾಯತ ಕಾರ್ಯಲಯದ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ನಮೂನೆಗಾಗಿ ಖಾನಾಪೂರ ತಾಲೂಕಿನ ಎಂಆರ್‌ಡಬ್ಲ್ಯೂ ಅಧಿಕಾರಿಯ ದೂರವಾಣಿ:9908216302 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವೇದಾಂತ ಪರಿಷತ್ ಇಂದಿನಿಂದ



ಮುಧೋಳ: ತಾಲೂಕಿನ ಮುಗಳಖೋಡದಲ್ಲಿ ನ.8 ರಿಂದ 13 ರವರಿಗೆ 39 ನೇ ವೇದಾಂತ ಪರಿಷತ್ ಗುರುಪಾದೇಶ್ವರ ಮಹಾಸ್ವಾಮಿಗಳ ಪುಣ್ಯಸ್ಮರಣೆ ನಡೆಯಲಿದೆ. ಪ್ರತಿದಿನ ಪ್ರವಚನ, ಭಜನೆ, ಕೀರ್ತನೆ, ಸಾಂಸ್ಕೃತಿಕ ಕಾರ್ಯಕ್ರಮ, ಶ್ರೀಗಳಿಗೆ ಕೀ–ರಿಟ್ ಪೂಜೆ, ತುಲಾಭಾರ, ಮಹಾಪ್ರಸಾದ ಆಯೋಜಿಸಲಾಗಿದೆ.

ಕರ್ನಾಟಕ ವಿವಿ ಗೌರವ ಡಾಕ್ಟರೇಟ್ ಪದವಿ ಪಡೆದ ಡಾ.ನಿರುಪಾದೇಶ್ವರ ಶ್ರೀಗಳಿಗೆ ಅಭಿನಂದನಾ ಸಮಾರಂಭ ನಡೆಯಲಿದ್ದು ನ.10ಕ್ಕೆ ಉಚಿತ ಕಣ್ಣಿನ ತಪಾಸಣೆ ಶಸ್ತ್ರ ಚಿಕಿತ್ಸೆ ಶಿಬಿರ ನೆರವೇರಿಸಲಾಗುವುದು, ನ.12ಕ್ಕೆ ರಾಜ್ಯಮಟ್ಟದ ಭಜನಾ ಸ್ಪರ್ಧೆ ಹಾಗು ಅರಳಿಕಟ್ಟಿ ಫೌಂಡೇಶನದಿಂದ ಉಚಿತ ಬಿಪಿ, ಶುಗರ ಹಾಗೂ ಇಸಿಜಿ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಎಂದು ಪೀಠಾದಿಪತಿ ರಾಮಯ್ಯ ಶ್ರೀಗಳು ತಿಳಿಸಿದ್ದಾರೆ.

# ಡಾ. ಗಿರೀಶ ಸೋನವಾಲ್ಕರ ನೂತನ ಕ್ರೆಡಿಟ್ ಸಹಕಾರಿ ಸಂಘ ಉದ್ಘಾಟಿಸಿದ ಐಜಿಪಿ ವಿಕಾಸ್ ಕುಮಾರ್



ಬೆಳಗಾವಿ: ನಗರದ ಕ್ಲಬ್ ರೋಡ್‌ನಲ್ಲಿರುವ ಕ್ರಿಶ್ ಕ್ಲಬ್ ರೆಸಿಡೆನ್ಸಿಯಲ್ಲಿ ಬುಧವಾರ ಡಾ. ಗಿರೀಶ ಸೋನವಾಲ್ಕರ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ. ನೂತನ ಬ್ಯಾಂಕ್‌ನ್ನು ಐಜಿಪಿ ವಿಕಾಸ್ ಕುಮಾರ್ ಅವರು ಉದ್ಘಾಟಿಸಿದರು.

ಈ ವೇಳೆ ಐಜಿಪಿ ವಿಕಾಸ್ ಕುಮಾರ್ ಅವರು ಮಾತನಾಡಿ, ವೈದ್ಯರಾದ ಡಾ. ಸೋನವಾಲ್ಕರ ಅವರು ಈಗಾಗಲೇ ಸಮಾಜ ಸೇವೆ ಮಾಡುತ್ತಿದ್ದಾರೆ. ಇದೀಗ ಸಹಕಾರಿ ಸಂಸ್ಥೆ ಆರಂಭಿಸಿರುವುದು ಸಂಸತ ತಂದಿದೆ. ಈ ಸಹಕಾರಿ ಸಂಘ ಉನ್ನತ ಮಟ್ಟಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು.

ಅತ್ಯಂತ ಕಡಿಮೆ ಅವಧಿಯಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಡಾ. ಸೋನವಾಲ್ಕರ ಅವರು ಉತ್ತಮ ಸಾಧನೆಯತ್ತ ದಾಪುಗಾಲು ಹಾಕಿರುವುದು ಶ್ಲಾಘನೀಯ, ಬಡ ಜನರಿಗೆ ಸಹಾಯ–ಸಹಕಾರ ಮಾಡುವ ಉದ್ದೇಶದಿಂದ ಈ ಬ್ಯಾಂಕ್ ಆರಂಭವಾಗಿದೆ. ಬ್ಯಾಂಕ್ ಅಭಿವೃದ್ಧಿಯಲ್ಲಿ ಸಿಬ್ಬಂದಿಗಳ ಪಾತ್ರ ಕೂಡ ಮುಖ್ಯವಾಗಿದೆ. ಹೀಗಾಗಿ ಸಿಬ್ಬಂದಿಗಳ ಅತ್ಯುತ್ತಮ ಸೇವೆಯಿಂದ ಈ ಬ್ಯಾಂಕ್ ಅಭಿವೃದ್ಧಿಯತ್ತ ಸಾಗಲಿ. ಮುಂದಿನ ದಿನಗಳಲ್ಲಿ ಜಿಲ್ಲಾದ್ಯಂತ ಶಾಖೆಗಳನ್ನು ಪ್ರಾರಂಭಿಸಲಿ. ಸಂಘದ ಬೆಳವಣಿಗೆಗೆ ಎಲ್ಲರ ಸಹಕಾರ ಅಗತ್ಯ ವಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಡಾ. ಗಿರೀಶ ಸೋನವಾಲ್ಕರ , ನ್ಯಾಯವಾದಿ ಬಸವರಾಜ ಬಾವಲತ್ತಿ, ಶ್ವೇತಾ ಸೊನವಾಲ್ಕರ , ಡಾ. ಪ್ರಕಾಶ ಸೋನವಾಲ್ಕರ, ವಿಜಯ ಸೋನವಾಲ್ಕರ, ಸವಿತಾ ಅಲಾರಡ್ಡಿ , ಪರಮೇಶ ಮುಲ್ಲೂರ, ರವಿ ಜುಗನ್ನವರ,ಬೈರಗೌಡ ಪಾಟೀಲ್ , ಬಸನಗೌಡ ಕಾಮನಗೌಡರ, ಡಿ.ಆರ್ ಪಾಟೀಲ, ಸಿದ್ದಪ್ಪ ಶಾಬಣ್ಣವರ, ರಂಗನಾಥ ಮಳಲಿ ಹಾಗೂ ಬ್ಯಾಂಕ್ ಸಿಬ್ಬಂದಿ ಇತರರು ಇದ್ದರು.

# ಯಲ್ಲಮ್ಮ ದೇವಸ್ಥಾನ ಪ್ರಾಧಿಕಾರದ ಕಾರ್ಯದರ್ಶಿಯಾಗಿ ನೇಮಕ

### ಎಸ್ ಪಿಬಿ ಮಹೇಶ -ಉಪಕಾರ್ಯದರ್ಶಿ ನಾಗರತ್ನಾ ಚೋಳಿನ ಅವರನ್ನು ಯಲ್ಲಮ್ಮ ದೇವಸ್ಥಾನ ಸಿಬ್ಬಂದಿಯಿಂದ ಸತ್ಕಾರ



ಉಗರಗೋಳ : ಸಮೀಪದ ಯಲ್ಲಮ್ಮನಗುಡ್ಡದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಯಲ್ಲಮ್ಮ ದೇವಸ್ಥಾನ ಪ್ರಾಧಿಕಾರದ ಕಾರ್ಯದರ್ಶಿಯಾಗಿ ನೇಮಕಗೊಂಡ ಎಸ್ ಪಿಬಿ ಮಹೇಶ ಮತ್ತು ಉಪಕಾರ್ಯದರ್ಶಿ ನಾಗರತ್ನಾ ಚೋಳಿನ ಅವರನ್ನು ಯಲ್ಲಮ್ಮ ದೇವಸ್ಥಾನ ಸಿಬ್ಬಂದಿ ಸತ್ಕರಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಎಸ್ ಪಿಬಿ ಮಹೇಶ ' ಯಲ್ಲಮ್ಮನಗುಡ್ಡದ ಸಮಗ್ರ ಅಭಿವೃದ್ಧಿಗಾಗಿ ಈ ಪ್ರಾಧಿಕಾರ ರಚಿಸಲಾಗಿದೆ. ಜನಪ್ರತಿನಿಧಿಗಳು, ಅಧಿಕಾರಿಗಳು, ಸಿಬ್ಬಂದಿ ಮತ್ತು ಭಕ್ತರ ಸಹಕಾರದಿಂದ ಗುಡ್ಡದಲ್ಲಿ ಅಭಿವೃದ್ಧಿ ಕೆಲಸ ಕೈಗೊಳ್ಳಲಾಗುವುದು. ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ಕೊಡಲಾಗುವುದು' ಈ ಪ್ರಾಧಿಕಾರದ ಮೂಲಕ ಗುಡ್ಡದಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸಗಳಾಗಲಿವೆ ಎಂದರು.

ಎಮ್ ಪಿ ದ್ಯಾಮನಗೌಡ್ರ, ಡಿ ಆರ್ ಚವ್ಹಾಣ, ಅಲ್ಲಮಪ್ರಭು ಪ್ರಭುನವರ, ಆರ್ ಎಚ್ ಸವದತ್ತಿ, ಪ್ರಭು ಹಂಜಗಿ, ರಾಜು ಬೆಳವಡಿ, ಸಿ ಎನ್ ಕುಲಕರ್ಣಿ, ಜಿ ಎಮ್ ಗಡೇಕಾರ, ಪ್ರಕಾಶ ಪ್ರಭುನವರ, ಶ್ರೀಮತಿ ಮುದ್ದನಗೌಡ್ರ, ಚನ್ನಪ್ಪ ಮದ್ಲಿ, ಸಂಗಮೇಶ ಪಂಪನವರ, ಸಿದ್ದನಗೌಡ ಪಾಟೀಲ, ಚಂದ್ರು ಹಿರೇಕೆಂಚನ್ನವರ, ರಂಜಿತ ಬಜಂತ್ರಿ, ವ್ಹಿ ಆರ್ ನಿಲಗುಂದ, ರಮೇಶ ಶಿಂಧೆ, ವ್ಹಿ ಟಿ ಜಂತ್ಲಿ, ಸವದತ್ತಿ ಮಾನಪ್ಪಾ ಹಾಗೂ ದೇವಸ್ಥಾನ ಸಿಬ್ಬಂದಿ ಇದ್ದರು.

## ಪೋಸ್ಕೋ– ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ತರಬೇತಿ

# ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಮುಖ್ಯೋಪಾಧ್ಯಾಯರ ಪಾತ್ರ ಮುಖ್ಯ

**ಬಾಗಲಕೋಟೆ:** : ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಮುಖ್ಯೋಪಾಧ್ಯಾಯರ ಪಾತ್ರ ಬಹು ಮುಖ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ ಹೇಳಿದರು.

ಮಿಷನ್ ವಾತ್ಸಲ್ಯ, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಯುನಿಸೆಫ್ ಸಹಯೋಗದಲ್ಲಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರಿಗೆ ಮಕ್ಕಳ ರಕ್ಷಣಾ ನೀತಿ, ಪೋಸ್ಕೋ ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಂದು ಪ್ರೌಢಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ ರಚನೆಮಾಡಿ ಕಾಯ್ದೆಗಳು ಸಮರ್ಪಕ ಅನುಷ್ಠಾನಗೊಳ್ಳುವಂತೆ ಆಗಬೇಕು. ಪೋಸ್ಕೋ ಕಾಯ್ದೆಯಡಿ ಪ್ರಕರಣಗಳು ದಾಖಲೆ ಆಗುತ್ತಿವೆ. ಆದರೆ ಯಾವ ಪ್ರಕರಣ ರಿಜಲ್ಟ ಕೊಡುತ್ತಿಲ್ಲ. ಕಾಯ್ದೆಗಳು ಜಾ–ರಿಗೆ ತರಲಾಗುತ್ತಿದೆ. ಆದರೆ ಸರಿಯಾಗಿ ಅನುಷ್ಟಾನಗೊಳ್ಳುತ್ತಿಲ್ಲ. ಕಾಯ್ದೆಗಳ ಬಗ್ಗೆ ಜಾಗೃತಿ ಹೆಚ್ಚಾಗಬೇಕಿದೆ. ಮಕ್ಕಳಲ್ಲಿ ಕಾನೂನು ಅರಿವು ಮೂಡಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಮುಖ್ಯೋಪಾಧ್ಯಾಯರ ಪಾತ್ರ ಬಹು ಮುಖ್ಯವಾಗಿದೆ ಎಂದು ತಿಳಿಸಿದರು.



ಅಧ್ಯಕ್ಷತೆ ವಹಿಸಿದ್ದ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ ತಲೆ ಮಾ–ರಿನಿಂದ ಸಮಾಜದಲ್ಲಿ ಕೆಲವೊಂದು ಅನಿಷ್ಟ ಪದ್ದತಿಗಳು ಇನ್ನು ಜೀವಂತವಾಗಿವೆ. ಅವುಗಳಲ್ಲಿ ಬಾಲ್ಯವಿವಾಹ ಒಂದಾಗಿದ್ದು, ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಾದ್ಯವಾಗುತ್ತಿಲ್ಲ. ಅನುಷ್ಠಾನದ ಪ್ರಮಾಣ ಕಡಿಮೆಯಾಗುತ್ತಿದೆ. ಹೆಚ್ಚಿಗೆ ಆಗುತ್ತಿಲ್ಲ. ಈ ನಿಟ್ಟಿನಲ್ಲಿ ಗ್ರಾಮೀಣ ಮಟ್ಟದಲ್ಲೂ ಹೆಚ್ಚಿನ ಜಾಗೃತಿ ಮೂಡಿಸುವ ಮೂಲಕ ಮಕ್ಕಳ ಹಕ್ಕುಗಳ ಕಾಯ್ದೆಗಳು ಸಮರ್ಪವಾಗಿ ಅನುಷ್ಠಾನಗೊಳ್ಳುವಂತೆ ಮಾಡಲು ತಿಳಿಸಿದರು.

ಮಕ್ಕಳಲ್ಲಿ ಪಾಠದ ಜೊತೆಗೆ ಒಳ್ಳೇಯ ನಡತೆ, ಕೌಶಲ್ಯ ಹಾಗೂ ಸ್ವಯಂ ರಕ್ಷಣೆ ಮಾಡುಕೊಳ್ಳಲು ಕರಾಟೆ ತರಬೇತಿ ನೀಡಿ ಶಕ್ತಿ ಬರುವಂತೆ ಮಾಡಬೇಕು. ಅಂದಾಗ ಮಾತ್ರ ಮಕ್ಕಳನ್ನು ರಕ್ಷಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವಲ್ಲಿ ಶ್ರಮವಹಿಸಲು ತಿಳಿಸಿದ ಅವರು ಶಾಲಾ ವಾತಾವರಣ ಸ್ವಚ್ಚವಾಗಿಟ್ಟುಕೊಳ್ಳಲು ತಿಳಿಸಿದರು. ಈ ಸಂದರ್ಭದಲ್ಲಿ ದತ್ತು ಮಾಸಾಚರಣೆ ನವೆಂಬರ–24ರ ಅಂಗವಾಗಿ ದತ್ತು ಮಾಹಿತಿ ಕುರಿತು ಬಿತ್ತಿ ಪತ್ರಿಕೆಗಳನ್ನು ಬಿಡುಗಡೆಗೊಳಿಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾದ ಕೊಪ್ಪಳದ ಯುನಿಸೆಫ್‌ನ ಹ–ರೀಶ ಜೋಶಿ ಮಕ್ಕಳ ರಕ್ಷಣಾ ನೀತಿ–2016, ಪೋಸ್ಕೋ ಕಾಯ್ದೆ–2012, ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ವಿವರವಾಗಿ ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪನಿರ್ದೇಶಕ ಪ್ರಭಾಕರ ಕೆ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಡಾ.ವೀಣಾ ಸೇ–ರಿದಂತೆ ಇತರರು ವೇದಿಕೆ ಮೇಲೆ ಇದ್ದರು. ತರಬೇತಿ ಕಾರ್ಯಾಗಾರದಲ್ಲಿ ಬಾಗಲಕೋಟೆ, ಹುನಗುಂದ ಹಾಗೂ ಬಾದಾಮಿ ತಾಲೂಕಿನ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಪಾಲ್ಗೊಂಡಿದ್ದರು.

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 229 Postal Reg No. PMG/KA/NK/BM/135/22-24 / POST AT Vantamury Colony Post Office